ರೈತರಿಂದ ರೈತರಿಗಾಗಿ ರೈತರಿಗೋಸ್ಕರ

# ಕೃಷಿ ಕ್ರಾಂತಿ

ಉಚಿತ ವಿತರಣೆ

ಸಂಪುಟ - 1 ಸಂಚಿಕೆ - 2 ಸಂಪಾದಕರು: ಜಿ.ವಿ. ಚಂದ್ರಶೇಖರ್ ಆಂತರಿಕ ಪ್ರಸಾರ

ಬಹುವಾರ್ಷಿಕ ಬೆಳೆ ಕಬ್ಬು



# ನಿರಂತರವಾಗಿ ಬೆಳೆಸಿರಿ ಸಾವಯವ ಕೃಷಿಯಲ್ಲಿ ಕೂಳೆ ಕಬ್ಬು

ಒಬ್ಬ ಕೃಷಿಕನಾಗಿ ಒಕ್ಕಲುತನದ ಏಳುಬೀಳುಗಳನ್ನು, ಸುಖ ದುಃಖಗಳ ಅನುಭವಗಳನ್ನು ಬಲ್ಲ ನನಗೆ ಬಹಳ ಆಶ್ಚರ್ಯಕರವಾಗಿ ಕಾಡಿದ ಪ್ರಶ್ನೆಯೆಂದರೆ ಇಂದು ನಾವು ಸಾಕಷ್ಟು ಕೃಷಿ ಅಭಿವೃದ್ಧಿ ಸಾಧಿಸಿದ್ದೇವೆ. ಆಹಾರ ಉತ್ಪನ್ನಗಳ ಉತ್ಪಾದನೆಯಲ್ಲಿ ಸಾಕಷ್ಟು ಸ್ವಾವಲಂಬನೆ ಸಾಧಿಸಿದ್ದೇವೆ? ಒಟ್ಟಾರೆ ಕೃಷಿ ಅಭಿವೃದ್ಧಿ ಪಥದಲ್ಲಿದೆ. ಆದರೆ ರೈತರ ಕಲ್ಯಾಣ ಏಕೆ ಆಗಿಲ್ಲ?

ಕೃಷಿ ಅಭಿವೃದ್ಧಿ ಮತ್ತು ರೈತರ ಕಲ್ಯಾಣ ಒಂದೇ ನಾಣ್ಯದ ಎರಡು ಮುಖಗಳಾಗಬೇಕು. ಆದರೆ ಇಂದು ಸುಧಾರಿತ ತಳಿಗಳು, ರಸಗೊಬ್ಬರಗಳು, ಕೀಟನಾಶಕಗಳು, ಅತ್ಯಾಧುನಿಕ ಯಂತ್ರೋಪಕರಣಗಳು ಕಳೆನಾಶಕಗಳು – ಆಧುನಿಕ ನೀರಾವರಿ ವ್ಯವಸ್ಥೆಗಳ ನಿರ್ವಹಣೆ ಹೀಗೆ ದಿನದಿಂದ ದಿನಕ್ಕೆ ರಾಸಾಯನಿಕ ಕೃಷಿಯಲ್ಲಿ, ಕೃಷಿ ಮೇಲಿನ ವೆಚ್ಚ ಏರುತ್ತಿದ್ದರೂ ರಾಸಾಯನಿಕ ಕೃಷಿಯಲ್ಲಿ ಕಬ್ಬಿನ ಸರಾಸರಿ ಇಳುವರಿ ಎಕರೆಗೆ 30–40 ಟನ್‌ಗೆ ಕುಸಿದಿರುವುದಕ್ಕೆ ಕಾರಣವೇನು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ನಾನು ತಿಳಿದುಕೊಂಡ ಸತ್ಯಗಳೆನೆಂದರೆ, ನಾವು ಮಣ್ಣನ್ನು ಮಲಿನ ಗೊಳಿಸಿದ್ದೇವೆ. ಜೈವಿಕ ಪರಿಸರ ಹಾಳು ಮಾಡಿದ್ದೇವೆ, ಕೃಷಿಯ ಸ್ವಾಭಾವಿಕ ಕೊಡುಗೆಗಳನ್ನು ನಿರ್ಲಕ್ಷಿಸುತ್ತಿದ್ದೇವೆ. ಇಂದು ನಾವು ಅನುಸರಿಸುತ್ತಿರುವ ಕೃಷಿ. ಕೃತಕಗೊಬ್ಬರಗಳಿಂದ, ಕೃತಕ ಬೆಳೆಗಳನ್ನು ಬೆಳೆಯುವ ಪರಿಪಾಠ ಕಲಿತಿರುವುದು ಭವಿಷ್ಯದಲ್ಲಿ ಬಹಳ ಅಪಾಯಕಾರಿ ಬೆಳವಣಿಗೆಯಾಗಿದೆ.

ಮಣ್ಣು ಒಂದು ಜೀವಂತ ವಸ್ತು, ಮಣ್ಣಿನಲ್ಲಿ ಕಣ್ಣಿಗೆ ಕಾಣದ ಕೋಟ್ಯಾನುಕೋಟಿ ಸೂಕ್ಷ್ಮಾಣು ಜೀವಿಗಳು ಹಾಗೂ ಕಣ್ಣಿಗೆ ಕಾಣುವ ಎರೆಹುಳು ಇದೆ ಎಂಬ ಪ್ರಾಕೃತಿಕ ಸತ್ಯವನ್ನು ಮರೆತು ಕೃಷಿ ಮಾಡುತ್ತಿರುವುದೆ ಇಂದಿನ ಅನೇಕ ಕೃಷಿ ಸಮಸ್ಯೆಗಳಿಗೆ ಕಾರಣವಾಗಿದೆ. ಸತತ ರಾಸಾಯನಿಕಗಳ ಬಳಕೆಯಿಂದ ಮಣ್ಣಿನ ಮೇಲ್ಪದರ ಬಹಳ ಗಟ್ಟಿಯಾಗಿ ಬೇರುಗಳ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಕೂಳೆ ಕಬ್ಬು ಬೆಳೆಯಲು ಅನುಕೂಲಕರ ಹೊಸ ಬೇರಿನ ಸಮೂಹ ಬೆಳೆಯಲಾಗದೆ, ಬೇರು ಸಮೂಹ ನಾಶವಾಗಿ ಕೊಳೆ ರೋಗಗಳಿಗೆ ತುತ್ತಾಗಿ ಒಂದು ಅಥವಾ ಎರಡು ಬೆಳೆಗೆ ಬಹುವಾರ್ಷಿಕ ಬೆಳೆ ಕಬ್ಬು ಸೀಮಿತವಾಗುತ್ತಿದೆ.

ಕೂಳೆಬೆಳೆಗಳನ್ನು ಬೆಳೆಯ ಲಾಗದ ಪರಿಸ್ಥಿತಿಯಿಂದ ಕೃಷಿಯಲ್ಲಿಹೆಚ್ಚುಲಾಭಗಳಿಸಲು ರೈತರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ರೈತರ ಕಲ್ಯಾಣ ಸಾಧ್ಯವಾಗುತ್ತಿಲ್ಲ ಎಂಬ ಅಂಶ ನನಗೆ ಮನವರಿಕೆಯಾಗಿದೆ. ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಬೇಕಾಗಿದ್ದ ಸಜೀವ ಮಣ್ಣು ವಿನಾಶದ ಅಂಚಿನಲ್ಲಿದ್ದು, “ಕೃಷಿತೋ ನಾಸ್ತಿ ದುರ್ಭಿಕ್ಷಂ” ಎಂಬ ಧ್ಯೇಯವಾಕ್ಯ ಅರ್ಥ ಕಳೆದುಕೊಳ್ಳುತ್ತಿರುವುದು ಆತಂಕಕಾರಿಯಾಗಿದೆ. ಮಣ್ಣಿನ ಮಾಲಿನ್ಯ ನಿವಾರಣೆಯಾಗದ ಹೊರತು ರೈತರ ಕಲ್ಯಾಣ ಸಾಧ್ಯವಾಗದು ಎಂಬ ಸತ್ಯವನ್ನು ಸಮಾಜ ಸರ್ಕಾರ, ರೈತರು ಅರಿತುಕೊಳ್ಳಬೇಕಾಗಿದೆ.

ಈ ನಿಟ್ಟಿನಲ್ಲಿ ಈ ಸಂಚಿಕೆಯಲ್ಲಿ ಬಹುವಾರ್ಷಿಕ ಬೆಳೆ ಕಬ್ಬಿನ ಕೃಷಿಯಲ್ಲಿ ಸ್ಥಿರತೆ ಸಾಧಿಸಿ ಯಶಸ್ವಿ ಕೂಳೆಬೆಳೆ ಬೆಳೆಯುವ ಕಲೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

➲ 2ನೇ ಪುಟಕ್ಕೆ



ಶ್ರೀ ಕೆ.ಆರ್. ಹುಲ್ಲುನಾಚೇಗೌಡ
ಎಂ.ಎಸ್ಸಿ., (ರೇಷ್ಮೆ ಕೃಷಿ)
ಸಾವಯವ ಕೃಷಿ ತಜ್ಞರು,
ಅಧ್ಯಕ್ಷರು, ಸಸ್ಯ ಸಂಜೀವಿನಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ (ರಿ)

**ಕೃಷಿತೋ ನಾಸ್ತಿ ದುರ್ಭಿಕ್ಷಂ**

**ಕೃಷಿ ಅಭಿವೃದ್ಧಿ ಮತ್ತು ರೈತರ ಕಲ್ಯಾಣ ಒಂದೇ ನಾಣ್ಯದ ಎರಡು ಮುಖಗಳಾಗಲಿ**




ಕೃಷಿ ಅಭಿವೃದ್ಧಿ




ರೈತರ ಕಲ್ಯಾಣ

## ಸುಸ್ಥಿರ ಸಾವಯವ ಕೂಳೆಕಬ್ಬು ಕೃಷಿಯ ಲಾಭಗಳೇನು?

- ಖರ್ಚು ಕಡಿಮೆ ಆದಾಯ ಹೆಚ್ಚಾಗುತ್ತದೆ.
- ಪದೇಪದೇ ಉಳುಮೆ ಮಾಡುವುದು ತಪ್ಪುತ್ತದೆ.
- ಬೆಳೆಯಿಂದ ಬೆಳೆಗೆ ಸಮಯದ ಅಪವ್ಯಯ ಇರುವುದಿಲ್ಲ.
- ಸಾವಯವ ತ್ಯಾಜ್ಯಗಳು ಹಾಗೂ ರವದಿಯನ್ನು ಪೂರ್ಣವಾಗಿ ಬಳಸಿಕೊಳ್ಳಬಹುದು.
- ಮಣ್ಣಿನಲ್ಲಿ ಜೈವಿಕ ಪರಿಸರ ಅಭಿವೃದ್ಧಿ ಹೊಂದುತ್ತದೆ.
- ನಿರಂತರವಾಗಿ ತ್ಯಾಜ್ಯಗಳು ಕಳಿತು ಹ್ಯೂಮಸ್ ನಿರ್ಮಾಣವಾಗುತ್ತದೆ.
- ಕೂಲಿಕಾರರ ಕೆಲಸ ಕಡಿಮೆಯಾಗುತ್ತದೆ.
- ಪದೇಪದೇ ಲವಣಿ ಮಾಡುವ ಕೆಲಸ ಇರುವುದಿಲ್ಲ.
- ಕಡಿಮೆ ನೀರಿನ ಬಳಕೆಯಿಂದ ಉತ್ತಮ ಬೆಳೆ ತೆಗೆಯಬಹುದು.
- ಬಹುವಾರ್ಷಿಕ ಬೆಳೆಗಳಲ್ಲಿ ಕನಿಷ್ಠ ಶ್ರಮದಲ್ಲಿ ಗರಿಷ್ಠ ಲಾಭಗಳಿಸಬಹುದು.
- ನಿರಂತರ ಸಾವಯವ ಕೃಷಿಯಿಂದ ಕಳೆಗಳು (ಕಸ) ಕಡಿಮೆಯಾಗುತ್ತವೆ.
- ವೈಜ್ಞಾನಿಕವಾಗಿ ಸಾವಯವ ಪದ್ಧತಿಯಲ್ಲಿ ಪೋಷಕಾಂಶಗಳನ್ನು ನಿರ್ವಹಿಸಿದಲ್ಲಿ ಬೆಳೆಯಿಂದ ಬೆಳೆಗೆ ಇಳುವರಿ ಹೆಚ್ಚುತ್ತದೆ.
- ಅಮೂಲ್ಯವಾದ ಮಣ್ಣು ಜೀವಿಗಳು ಅಭಿವೃದ್ಧಿ ಹೊಂದುತ್ತವೆ.
- ರಾಸಾಯನಿಕಗಳು ಮತ್ತು ವಿಷಗಳಿಂದ ಮಣ್ಣು ಮತ್ತು ರೈತ ಕುಟುಂಬಕ್ಕೆ ಮುಕ್ತಿ.
- ವಿಷಮುಕ್ತ ಮಣ್ಣು ವಿಷಮುಕ್ತ ನೀರು, ವಿಷಮುಕ್ತ ಆಹಾರದ ಉತ್ಪಾದನೆಯಾಗುತ್ತದೆ.
- ಪ್ರಕೃತಿಯ ಸಹಕಾರವನ್ನು ಗರಿಷ್ಠ ಬಳಸಿಕೊಂಡು ಕೃಷಿ ಮಾಡುವುದರಿಂದ ಒತ್ತಡ ರಹಿತ ಕೃಷಿ ಸಾಧ್ಯವಾಗುತ್ತದೆ.
- ಸಾವಯವ ಬೆಲ್ಲ & ಸಕ್ಕರೆ ಉತ್ಪನ್ನಗಳಿಗೆ ಭಾರಿ ಬೇಡಿಕೆ ಇರುವುದರಿಂದ ರಾಷ್ಟ್ರೀಯ, ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ರೈತರಿಗೆ ಒಳ್ಳೆಯ ಲಾಭ ಸಿಗಬಹುದು.

ಕಲಿಯಿರಿ ಕಲಿಸಿರಿ

## ಕಬ್ಬಿನ ಕೃಷಿಯಲ್ಲಿ ಜೀವಂತ ಮಣ್ಣು ಮತ್ತು ಘನ, ದ್ರವ, ಅನಿಲ




ಮಣ್ಣಿನಲ್ಲಿ ಕಾಣುವ ಮೂರು ರೂಪಗಳು

ಭೌತಿಕವಾಗಿ ಮಣ್ಣು ಘನರೂಪವಾಗಿದ್ದರೂ, ಮಣ್ಣಿನ ಕಣಗಳ ಸಂದುಗಳಲ್ಲಿನ ಖಾಲಿ ಜಾಗಗಳಲ್ಲಿ, ಗಾಳಿ ಮತ್ತು ನೀರುಗಳೆರಡು ಇರುತ್ತದೆ. ಅಂದರೆ ಪ್ರಕೃತಿಯಲ್ಲಿನ ಮೂರು ಗುಣಗಳಾದ ಘನ, ದ್ರವ ಹಾಗೂ ಅನಿಲಗಳ ರೂಪಗಳನ್ನು ಮಣ್ಣಿನಲ್ಲಿ ಕಾಣಬಹುದಾಗಿದ್ದು, ಮಣ್ಣಿನಲ್ಲಿ ಈ ಮೂರು ರೂಪಗಳು ಮಣ್ಣಿನಲ್ಲಿ ಸಮತೋಲನದಲ್ಲಿದ್ದಾಗ ಕೋಟ್ಯಾನುಕೋಟಿ ಸೂಕ್ಷ್ಮಾಣು ಜೀವಿಗಳು ಹಾಗೂ ಮಣ್ಣು ಜೀವಿಗಳು ಅಭಿವೃದ್ಧಿ ಹೊಂದಿ ಪರಿಸರ ನಿರ್ಮಾಣಕ್ಕೆ ಅನುಕೂಲಕರವಾದ ವಾತಾವರಣ ಸೃಷ್ಟಿಯಾಗುತ್ತದೆ.

ಘನರೂಪದ ನಿರವಯವ ಪದಾರ್ಥಗಳಾದ ಮಣ್ಣಿನ ಕಣಗಳು ಹಾಗೂ ಸಾವಯವ ವಸ್ತುಗಳು ಸಸ್ಯಗಳಿಗೆ ಆಧಾರವಾಗಿರುತ್ತವೆ. ಮೇಲೆ ತಿಳಿಸಿದಂತೆ ಕಣಗಳ ಸಂದುಗಳಲ್ಲಿನ ಖಾಲಿ ಜಾಗದಲ್ಲಿ ಸೂಕ್ಷ್ಮಾಣು ಜೀವಿಗಳಿಗೆ ಅವಶ್ಯವಿರುವ ನೀರು ಮತ್ತು ಗಾಳಿ ಸಿಗುವುದರಿಂದ ಸೂಕ್ಷ್ಮಾಣು ಜೀವಿಗಳು ಕ್ರಿಯಾಶೀಲವಾಗಿ ಮಣ್ಣಿನಲ್ಲಿನ ಪೋಷಕಾಂಶಗಳನ್ನು ಸಸ್ಯಕ್ಕೆ ಒದಗಿಸಿಕೊಡುತ್ತವೆ. ಮಣ್ಣಿನಲ್ಲಿನ ಪೋಷಕಾಂಶಗಳು ಸಸ್ಯಗಳಿಗೆ ಒದಗಲು ನೀರು/ತೇವಾಂಶ ಸಹಾಯ ಮಾಡುತ್ತದೆ. ಗಾಳಿ ಬೇರು ಮತ್ತು ಮಣ್ಣು ಜೀವಿಗಳ ಉಸಿರಾಟಕ್ಕೆ ಸಹಾಯ ಮಾಡುತ್ತದೆ. ಮಣ್ಣು ಜೀವಂತವಾಗಿದ್ದು, ಕಬ್ಬಿನ ಬೇರು ಸಮೂಹದಲ್ಲಿ ಉತ್ತಮವಾದ ಉಸಿರಾಟ ನಡೆಯುತ್ತದೆ.

## ಇದು ನಿಮಗೆ ತಿಳಿದಿರಲಿ

**ಬಾಳೆ, ಕಬ್ಬು ಬಹುವಾರ್ಷಿಕ ಬೆಳೆಗಳು.**

**Dr. Soil ಸಾವಯವ ಕೃಷಿಯಲ್ಲಿ ರೈತರು ವೈಜ್ಞಾನಿಕವಾಗಿ ನಿರ್ವಹಣೆ ಮಾಡಿಕೊಂಡಿದ್ದೇ ಆದಲ್ಲಿ ಬಾಳೆ ಸತತವಾಗಿ 10 ಬೆಳೆ ಕಬ್ಬು 30 ಕ್ಕೂ ಹೆಚ್ಚು ಕೂಳೆ ಬೆಳೆ ಬೆಳೆಯಬಹುದು. ಆದರೆ ರೈತರು ನಿರಂತರವಾಗಿ ಪೋಷಕಾಂಶ ನಿರ್ವಹಣೆ ಹಾಗೂ ಸಾವಯವ ಪದ್ಧತಿಯಲ್ಲಿ ರೋಗ ನಿರ್ವಹಣೆ ಮಾಡುವ ಜಾಣತನ ಕಲಿಯಬೇಕು. ಈ ಬಗ್ಗೆ ನಿರಂತರವಾಗಿ ಮುಂದಿನ ಸಂಚಿಕೆಗಳಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿ ರೈತರಿಗೆ ತಿಳಿಸಿಕೊಡಲಾಗುವುದು.**

## ಅನವಶ್ಯಕ ಉಳುಮೆಯನ್ನು ಕೈಬಿಡಿ

ಒಂದು ವೇಳೆ ಕೂಳೆ ಕಬ್ಬು ಬೆಳೆಯಲ್ಲಿ ಭೂಮಿಯಲ್ಲಿ ಮಣ್ಣು ಗಟ್ಟಿಯಾಗಿ ಬೇರು ಸಮೂಹ ಅಭಿವೃದ್ಧಿ ನಿಧಾನವಾದಾಗ ಉಳುಮೆ ಮಾಡುವ ಬದಲು ತಮ್ಮ ಜಾಣ್ಮೆ ಬಳಸಿ ಸ್ವಲ್ಪ ಹೆಚ್ಚಿಗೆ Dr. Soil ಬಳಸಿದಾಗ, ಮಣ್ಣು ಮೃದುವಾಗುತ್ತದೆ. ಕೂಳೆ ಕಬ್ಬು ಯಶಸ್ವಿಯಾಗಿ ಬೆಳೆಯುತ್ತದೆ. ಸೂಕ್ತ ಜೈವಿಕ ಪರಿಸರ ನಿರ್ಮಾಣದಿಂದ ಅನವಶ್ಯಕ ಉಳುಮೆಯನ್ನು ಕಬ್ಬಿನ ಗದ್ದೆಯಲ್ಲಿ ತಡೆಗಟ್ಟಬಹುದು.

# ನಿರಂತರವಾಗಿ ಬೆಳೆಸಿರಿ ಸಾವಯವ ಕೃಷಿಯಲ್ಲಿ ಕೂಳೆ ಕಬ್ಬು

➲ 1ನೇ ಪುಟದಿಂದ...

ಪ್ರತಿಯೊಬ್ಬ ರೈತನು ವಿಜ್ಞಾನಿಯಾಗಲಿ
ಸಾವಯವ ಕೃಷಿಯ ಸುಜ್ಞಾನ ಸಾರಲಿ

ಕಬ್ಬು ಒಂದು ಬಹುವಾರ್ಷಿಕ ಬೆಳೆಯಾಗಿದ್ದು, ಸಾವಯವ ವಿಜ್ಞಾನದ ತಂತ್ರಜ್ಞಾನಗಳನ್ನು ವೈಜ್ಞಾನಿಕವಾಗಿ ಅಳವಡಿಸಿಕೊಂಡಿದ್ದೆ ಆದಲ್ಲಿ ನಿರಂತರವಾಗಿ ಅತ್ಯಧಿಕ ಇಳುವರಿಯೊಂದಿಗೆ ಕೂಳೆಕಬ್ಬು ಬೆಳೆಯಬಹುದು. ಈ ನಿಟ್ಟಿನಲ್ಲಿ ರೈತರು ತಾಳ್ಮೆ, ಜಾಣ್ಮೆ ಹಾಗೂ ಜಾಗರೂಕತೆಗಳನ್ನು ವಹಿಸಬೇಕು ಹಾಗೂ ಸುಸ್ಥಿರ ಸಾವಯವ ಕೃಷಿಗೆ ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ಅರ್ಥಮಾಡಿಕೊಳ್ಳಬೇಕು. ಕಬ್ಬು ಒಂದು ಉಷ್ಣವಲಯದ ಬೆಳೆಯಾಗಿದ್ದು ಸಿ–04 ಗುಂಪಿಗೆ ಸೇರಿದ ಬೆಳೆ ಅಂದರೆ ಸೂರ್ಯನ ಬೆಳಕನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತದೆ. ಇದರಿಂದ ಕಬ್ಬಿನ ಇಳುವರಿ ಹೆಚ್ಚುತ್ತದೆ. ಕಬ್ಬು ಹುಲುಸಾಗಿ ಬೆಳೆಯಲು 25 ಡಿಗ್ರಿ – 30 ಡಿಗ್ರಿ ಸೆ. ಉಷ್ಣಾಂಶ ಬೇಕಾಗುತ್ತದೆ. ದಿನದ ಬೆಳಕಿನ ಕಾಲಾವಧಿ ಕಡಿಮೆಯಾದರೆ ಕಬ್ಬಿನ ಇಳುವರಿ ಮತ್ತು ಸಕ್ಕರೆ ಅಂಶ ಗಣನೀಯವಾಗಿ ಕಡಿಮೆಯಾಗುತ್ತದೆ. ಈ ನಿಟ್ಟಿನಲ್ಲಿ ರೈತರು ಕಬ್ಬು ಲವಣಿ ಮಾಡುವಾಗ ಸೂಕ್ತ ಅಂತರ ಇಡಬೇಕು. ಸಾಲಿಂದ ಸಾಲಿಗೆ ಕನಿಷ್ಠ 5 ಅಡಿ ಅಂತರ ವಿರಬೇಕು. ಕಬ್ಬಿನಿಂದ ಕಬ್ಬಿಗೆ 2 ಅಡಿ ಅಂತರವಿರಬೇಕು. ಸಾಲುಗಳನ್ನು ಪೂರ್ವ–ಪಶ್ಚಿಮ ದಿಕ್ಕಿಗೆ ಅಭಿಮುಖವಾಗಿ ಇರುವಂತೆ ಕಬ್ಬನ್ನು ನಾಟಿ ಮಾಡಬೇಕು. ಹೀಗೆ ಲವಣಿ ಮಾಡುವುದರಿಂದ ಕಬ್ಬಿನ ಬೆಳೆಗೆ ಸೂಕ್ತ ಗಾಳಿ, ಬೆಳಕು ಸಿಗುತ್ತದೆ.

### ನಿರಂತರ ಕೂಳೆಕಬ್ಬು ಬೆಳೆಸುವ ಮೊದಲು ಮಣ್ಣನ್ನು ಅರಿಯಿರಿ.

ಕಬ್ಬನ್ನು ಎಲ್ಲಾ ತರದ ಮಣ್ಣುಗಳಲ್ಲಿ ಬೆಳೆಯಬಹುದು. ಆದರೂ ಕಪ್ಪುಮಣ್ಣು ಮತ್ತು ಕೆಂಪುಮಣ್ಣು ಹೆಚ್ಚು ಸೂಕ್ತ ಎಂದು ಹೇಳಬಹುದು. ನಮ್ಮ ರಾಜ್ಯದ ಉತ್ತರ ಭಾಗದ ಜಿಲ್ಲೆಗಳಾದ ಬೆಳಗಾವಿ, ಬಿಜಾಪುರ, ಧಾರವಾಡ, ರಾಯಚೂರು, ಗುಲ್ಬರ್ಗ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಭಾಗದ ಜಿಲ್ಲೆಗಳಾದ ಮೈಸೂರು ಚಿತ್ರದುರ್ಗ, ಹಾಸನ, ಚಾಮರಾಜನಗರದ ಕೆಲವು ಪ್ರದೇಶಗಳಲ್ಲಿ ಕಪ್ಪು ಮಣ್ಣು ಕಂಡುಬರುತ್ತದೆ. ಬಹುತೇಕ ಕಪ್ಪುಮಣ್ಣು ಮತ್ತು ಕೆಂಪು ಮಣ್ಣು ಇರುವ ಪ್ರದೇಶದಲ್ಲಿ ಕಬ್ಬು ತೋಟಗಾರಿಕೆ ಬೆಳೆಯಾಗಿ ಹಂಚಿಕೆಯಾಗಿದೆ. ಕಪ್ಪು ಮಣ್ಣಿರುವ ಪ್ರದೇಶದಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ಸರಾಸರಿ 250–500 ಮೀ.ಲೀ. ಮಳೆಯಾಗುತ್ತದೆ. ಕಪ್ಪುಮಣ್ಣಿನಲ್ಲಿ 30 – 80% ರಷ್ಟು ಜೇಡಿ ಇದೆ. ಕಪ್ಪು ಮಣ್ಣು ನೀರು ಕುಡಿದಾಗ ಅರಳಿ ಹಿಗ್ಗುತ್ತವೆ ಮತ್ತು ಒಣಗಿದಾಗ ಕುಗ್ಗುತ್ತದೆ. ಈ ಮಣ್ಣಿನಲ್ಲಿ ಸಸ್ಯ ಪೋಷಕಾಂಶಗಳು ಹೆಚ್ಚಿಗೆ ಇರುತ್ತವೆ.

ಆದರೆ ಸತತ ರಾಸಾಯನಿಕಗಳ ಬಳಕೆಯಿಂದ ಮಣ್ಣು ಈಗ ಸಾವಯವ ಅಂಶ ಕಳೆದುಕೊಂಡಿದೆ. ಒಟ್ಟಿನಲ್ಲಿ ಕಬ್ಬನ್ನು ಎಲ್ಲಾ ತರದ ಮಣ್ಣುಗಳಲ್ಲಿ ಬೆಳೆಯಬಹುದು.

ಆದರೆ ಅತೀಕ್ಷಾರ ಮತ್ತು ಹುಳಿ ಮಣ್ಣುಗಳಲ್ಲಿ ಸರಿಯದ ಬೆಳವಣಿಗೆ ಇರುವುದಿಲ್ಲ. ಇದಕ್ಕೆ ಕಾರಣ ಬೆಳೆಗೆ ಬೇಕಾದ ಪೋಷಕಾಂಶಗಳ ಕೊರತೆಯುಂಟಾಗಿ ಬೆಳವಣಿಗೆ ಕುಂಠಿತಗೊಂಡು ಇಳುವರಿ ಕಡಿಮೆಯಾಗುತ್ತದೆ.

ಮಣ್ಣಿನಲ್ಲಿ ಸಾಕಷ್ಟು ಸಾವಯವ ಮತ್ತು ಜೈವಿಕ ತ್ಯಾಜ್ಯಗಳ ಅಂಶವಿದ್ದರೆ ಕಬ್ಬು ಹುಲುಸಾಗಿ ಬೆಳೆಯುತ್ತದೆ. ಕಬ್ಬು ದೀರ್ಘಾವಧಿ ಬೆಳೆಯಾದ್ದರಿಂದ ಪೋಷಕಾಂಶಗಳು ಬೆಳೆಗೆ 365 ದಿನ ಪೂರೈಕೆಯಾಗಬೇಕಾಗುತ್ತದೆ. ಆದ್ದರಿಂದ ಮಣ್ಣು ಫಲವತ್ತಾಗಿದ್ದರೆ ಇಳುವರಿ ಹೆಚ್ಚುತ್ತದೆ. ಹೀಗಾಗಿ ಮಣ್ಣಿನಲ್ಲಿ ಜೈವಿಕ ಪರಿಸರ ನಿರ್ಮಾಣವಾಗಿ ಮಣ್ಣು ಜೀವಂತವಾಗಿರಬೇಕು ರೈತನ ಮಿತ್ರ ಎರೆಹುಳು ಮಣ್ಣಿನಲ್ಲಿ ಇರಬೇಕು. Dr. Soil ಸಾವಯವ ಕೃಷಿಯಲ್ಲಿ Dr. Soil ಬಳಸಿದಾಗ ಮಣ್ಣಿನ ರಸಸಾರ ದಿನ ಕಳೆದಂತೆ ಸಮಸ್ಥಿತಿಗೆ ಬರುತ್ತದೆ. ಮಣ್ಣು ಮೃದುವಾಗುತ್ತದೆ. ಮಣ್ಣು ಚೆನ್ನಾಗಿ ಗಾಳಿಯಾಡುತ್ತದೆ. ಇದರಿಂದ ಮಣ್ಣಿನ ಜೀವಿಗಳು ಅಭಿವೃದ್ಧಿಗೊಂಡು ಫಲವತ್ತತೆ ಹೆಚ್ಚುತ್ತದೆ. Dr. Soil ನಲ್ಲಿ ಸಾವಯವ ಇಂಗಾಲವಿರುವುದರಿಂದ ಮಣ್ಣಿನಲ್ಲಿ ಎರೆಹುಳುಗಳು ಕ್ರಿಯಾಶೀಲವಾಗಿರುತ್ತವೆ. Dr.Soil ಬಳಕೆಯಿಂದ ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯಿಂದ ವ್ಯಾಮ್ ಶಿಲೀಂದ್ರಗಳು ಅಭಿವೃದ್ಧಿಗೊಂಡು ಮಣ್ಣು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಕಡಿಮೆ ನೀರಾವರಿ ಪರಿಸ್ಥಿತಿಗಳಲ್ಲಿ ಸಸ್ಯಗಳಿಗೆ ಅನಾವೃಷ್ಟಿ (ಬರ) ಸಹಿಸುವ ಶಕ್ತಿ ಹೆಚ್ಚಿಸುತ್ತದೆ.

ಈ ನಿಟ್ಟಿನಲ್ಲಿ ಕೂಳೆಕಬ್ಬು ನಿರಂತರವಾಗಿ ಬೆಳೆಸಬೇಕಾದರೆ ಮಣ್ಣಿನ ಜೈವಿಕ ಪರಿಸರ ಸುಸ್ಥಿರತೆಯಿಂದ ಆರೋಗ್ಯದಿಂದ ಕಾಪಾಡಿಕೊಳ್ಳಬೇಕು.

**ಕೂಳೆಕಬ್ಬು ಮತ್ತು ಬೇರಿನ ಉಸಿರಾಟ**

**ಕಬ್ಬಿನ ಬೆಳವಣಿಗೆ ಗುಟ್ಟು ಬೇರಿನಲ್ಲಿದೆ? ಬೇರಿನ ಗುಟ್ಟು ಎಲ್ಲಿದೆ? ಮಣ್ಣು ಮೃದುವಾಗಿದ್ದು, ಜೀವಂತವಾಗಿದ್ದು, ಸೂಕ್ಷ್ಮಾಣುಜೀವಿಗಳು ಕ್ರಿಯಾಶೀಲವಾಗಿದ್ದಾಗ ಬೇರುಗಳಲ್ಲಿ ಚೆನ್ನಾಗಿ ಉಸಿರಾಟ ಕ್ರಿಯೆ ನಡೆಯುತ್ತದೆ. ಕಬ್ಬು ಕಟಾವು ಆದ ನಂತರ ಹೊಸ ಬೇರುಗಳು ಸಮೃದ್ಧಿಯಾಗಿ ಅಭಿವೃದ್ಧಿಯಾದರೆ ಕೂಳೆಕಬ್ಬು ಯಶಸ್ವಿಯಾಗಿ ಬೆಳೆಯುತ್ತದೆ. ಕಬ್ಬಿನ ಬೆಳವಣಿಗೆ ಗುಟ್ಟು ಬೇರಿನಲ್ಲಿದೆ, ಬೇರಿನ ಅಭಿವೃದ್ಧಿ ಗುಟ್ಟು ಆರೋಗ್ಯಪೂರ್ಣ ಮಣ್ಣಿನಲ್ಲಿದೆ. ಆರೋಗ್ಯ ಪೂರ್ಣ ಮಣ್ಣಿನ ಗುಟ್ಟು ಸೂಕ್ತ ಸಾವಯವ ತ್ಯಾಜ್ಯ ಹಾಗೂ ಜೈವಿಕ ಪರಿಸರದ ನಿರ್ಮಾಣದಿಂದ ಮಾತ್ರ ಸಾಧ್ಯವಿದೆ. ತುರ್ತಾಗಿ ಸೂಕ್ತ ಜೈವಿಕ ಪರಿಸರ ನಿರ್ಮಾಣ ಮಾಡಲು ಡಾ.ಸಾಯಿಲ್‌ನಿಂದ ಸಾಧ್ಯವಾಗುತ್ತದೆ ಎಂಬ ಸತ್ಯವನ್ನು ರೈತರು ಅರಿಯಬೇಕಾಗಿದೆ.**

### ಯಶಸ್ಸು ಕೂಳೆಕಬ್ಬಿನ ಬೆಳವಣಿಗೆಗೆ ಸೂಕ್ತ ನೀರು ನಿರ್ವಹಣೆ ಬಹಳ ಮುಖ್ಯ.

ನೀರಿನ ನಿರ್ವಹಣೆ ಎಂದರೆ ಹೆಚ್ಚಿಗೆ ನೀರು ಬಿಡುವುದು ಎಂದು ಅರ್ಥವಲ್ಲ. ಅಧಿಕ ಇಳುವರಿ ಪಡೆಯಲು ಹದವರಿತು ನೀರು ಕೊಡಬೇಕು. Dr. Soil ಸಾವಯವ ಕೃಷಿಯಲ್ಲಿ ಕಬ್ಬಿಗೆ ಹೆಚ್ಚಿಗೆ ನೀರು ಕೊಡುವ ಅವಶ್ಯಕತೆ ಇರುವುದಿಲ್ಲ. ಕಬ್ಬಿನ ಗದ್ದೆಯಲ್ಲಿ ಯಾವುದೇ ಕಾರಣಕ್ಕೂ ನೀರು ನಿಲ್ಲುವಂತೆ ಮಾಡಬಾರದು. ಒಂದು ವೇಳೆ ನೀರು ನಿಂತರೆ ಮಣ್ಣಿನಲ್ಲಿ ಸೂಕ್ಷ್ಮಾಣುಜೀವಿಗಳ ಎರೆಹುಳುಗಳ ಚಟುವಟಿಕೆ ಕುಂಠಿತಗೊಂಡು ಸಸ್ಯಕ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ. ಕಬ್ಬು ಲವಣಿ ಮಾಡಿದ ಪ್ರಾರಂಭದಲ್ಲಿ ಸಸಿಗಳು ಬದುಕಿ ಉಳಿಯುವ ತನಕ ಮೇಲಿಂದ ಮೇಲೆ ನೀರು ಹಾಯಿಸುವುದು ಬಹಳ ಮುಖ್ಯ. ತದನಂತರ ಕಬ್ಬನ್ನು ಕಪ್ಪು ಮಣ್ಣಿನಲ್ಲಿ ಬೆಳೆದಿದ್ದರೆ 15 ದಿವಸಗಳಿಗೊಮ್ಮೆ ನೀರು ಹಾಯಿಸಬೇಕು. ಕೆಂಪು ಮಣ್ಣಿನಲ್ಲಾದರೆ 8 ದಿವಸಗಳಿಗೊಮ್ಮೆ ನೀರು ಹಾಯಿಸಿದರೆ ಸಾಕಾಗುತ್ತದೆ.

ಕಬ್ಬಿನ ಬೆಳವಣಿಗೆ ಕಾಲದಲ್ಲಿ ಈ ಕ್ರಮವನ್ನು ಅತ್ಯವಶ್ಯಕವಾಗಿ ಅನುಸರಿಸಬೇಕು. ಹೆಚ್ಚು ನೀರು ಬಿಟ್ಟರೆ ಕಬ್ಬಿನ ಇಳುವರಿ ಕಡಿಮೆಯಾಗುವ ಸಂಭವವಿರುತ್ತದೆ. ನೀರನ್ನು ಆಗಾಗ ತಡೆದು ಹಾಯಿಸಿದರೆ ಇಳುವರಿ ಹೆಚ್ಚುತ್ತದೆ. ಕಬ್ಬಿನಲ್ಲಿ ಗುನ್ನ ಬರುವಾಗ ಹೆಚ್ಚಿನ ನೀರು ಕೊಡಬಾರದು. ಕಬ್ಬಿನ ಕಟಾವು ಇನ್ನೂ ಒಂದು ತಿಂಗಳಿರುವಾಗ ನೀರು ಹಾಯಿಸುವುದು ಪೂರ್ತಿ ನಿಲ್ಲಿಸಬೇಕು. ಇದರಿಂದ ಸಕ್ಕರೆ ಪ್ರಮಾಣ ಹೆಚ್ಚಾಗುತ್ತದೆ, ಕಬ್ಬಿನ ಬೇರುಗಳಲ್ಲಿ ಸೂಕ್ಷ್ಮ ತಂತುಗಳಿದ್ದು 60 ಸೆಂ.ಮೀ. ಆಳದಿಂದ ತೇವಾಂಶವನ್ನು ಹೀರಿಕೊಳ್ಳುವ ಶಕ್ತಿ ಪಡೆದಿರುತ್ತದೆ.



ಕಬ್ಬಿನ ಗದ್ದೆಯಲ್ಲಿ ರವದಿ ಹಾಗೂ ಜೈವಿಕ ತ್ಯಾಜ್ಯಗಳ ಹೊದಿಕೆ ಹಾಕಿದ್ದರೆ 20 ರಿಂದ 30 ದಿನಗಳಿಗೊಮ್ಮೆ ನೀರು ಕೊಟ್ಟರು ತೇವಾಂಶ ಕಾಪಾಡಿಕೊಳ್ಳುತ್ತದೆ. ಇದು ಹೇಗೆ ಸಾಧ್ಯ? ನಾವು 3 ದಿನಗಳಿಗೊಮ್ಮೆ ನೀರು ಬಿಟ್ಟರು ಬೆಳೆ ಒಣಗುತ್ತಿದೆ ಎಂದು ನಿಮಗನಿಸಬಹುದು. ರಾಸಾಯನಿಕ ಕೃಷಿಯಲ್ಲಿ ಮಣ್ಣು ತೇವಾಂಶ ಹಿಡಿದಿಟ್ಟುಕೊಳ್ಳುವ ಶಕ್ತಿ ಕಳೆದುಕೊಂಡಿರುತ್ತದೆ. ಮಣ್ಣು ಗಟ್ಟಿಯಾಗಿ ನೀರು ಭೂಮಿ ಹಾಳಕ್ಕೆ ಬಸಿದಿರುವುದಿಲ್ಲ. ಪದೇಪದೆ ನೀರು ಬಿಟ್ಟು ಮಣ್ಣಿನ ಮೇಲ್ಪದರ ಬಹಳ ಗಟ್ಟಿಯಾಗಿರುವುದೇ ಇದಕ್ಕೆ ಕಾರಣ. Dr. Soil ಸಾವಯವ ಕೃಷಿಯಲ್ಲಿ ಮಣ್ಣು ಮೃದುವಾಗುತ್ತದೆ. ನಾವು ಬೆಳೆಗೆ ಕೊಟ್ಟ ನೀರು ಗುರುತ್ವಾಕರ್ಷಣೆ ಮೂಲಕ ಭೂಮಿಗೆ ಇಂಗುವಾಗ ಬೇರಿನ ಸಮೂಹಕ್ಕೆ ತೇವಾಂಶ ಸಿಗುತ್ತದೆ. ಇಂಗಿ ಭೂಮಿಯ ಒಳಗೆ ಹೋದ ನೀರು ನಾವು ಬೆಳೆಗೆ ನೀರು ಕೊಡುವುದು ತಡಮಾಡಿದಾಗ ಕೇಶಾಕರ್ಷಣೆ ಮೂಲಕ ತೇವಾಂಶ ಬೇರಿನ ಸಮೂಹಕ್ಕೆ ಸಿಗುತ್ತದೆ. ಈ ತಂತ್ರವನ್ನು ಅರಿತು ತಮ್ಮ ಜಾಣತನ ಬಳಸಿ Dr. Soil ಸಾವಯವ ಕೃಷಿಯಲ್ಲಿ ರೈತರು ಇಂತಹ ಪ್ರಾಕೃತಿಕ ನೀರು ನಿರ್ವಹಣೆಗೆ ಅವಕಾಶ ಮಾಡಿಕೊಡಬೇಕು.

### ಕೂಳೆ ಕಬ್ಬು ಮತ್ತು ಉಳುಮೆ

ಕಬ್ಬು ಕಟಾವು ಆದ ನಂತರ ಯಾವುದೇ ಕಾರಣಕ್ಕೂ ಉಳುಮೆ ಮಾಡಬಾರದು. Dr. Soil ಸಾವಯವ ಕೃಷಿಯಲ್ಲಿ ಈ ಕೆಲಸವನ್ನು ನಿಮ್ಮ ಮಣ್ಣಿನಲ್ಲಿರುವ ನಿಸರ್ಗದ ನೇಗಿಲು ಎರೆಹುಳು ನಿರಂತರವಾಗಿ ನಿರ್ವಹಿಸುತ್ತಿರುತ್ತದೆ ಹಾಗೂ ಮಣ್ಣಿನ ಜೈವಿಕ ಪರಿಸರ ಕ್ರಿಯಾಶೀಲವಾಗಿದ್ದು ಮಣ್ಣು ಮೃದುವಾಗಿರುತ್ತದೆ. ಇಲ್ಲಿ ನೀವು ಮಾಡಬೇಕಾದ ಕೆಲಸ ಮಣ್ಣಿಗೆ ಜೈವಿಕ ತ್ಯಾಜ್ಯಗಳನ್ನು ಹಾಗೂ ಅವಶ್ಯಕತೆ ಅರಿತು Dr. Soil ಅನ್ನು ನೀಡುವುದು. ಆದರೆ ನೀವು ಹೊಸದಾಗಿ ಲವಣಿ ಮಾಡುವಾಗ ಜಮೀನು ಹದಮಾಡುವುದು ಬಹಳ ಮುಖ್ಯ.

➲ 3ನೇ ಪುಟಕ್ಕೆ

# ಕೂಳೆ ಕಬ್ಬು ಮತ್ತು ಎರೆಹುಳು

ನಿರಂತರ ಕೂಳೆ ಕಬ್ಬು ಕೃಷಿ ಯಶಸ್ವಿಯಾಗಿ ಸಾಗಲು ಎರೆಹುಳುಗಳ ಕೊಡುಗೆ ಅಪಾರ ಎರೆಹುಳುಗಳನ್ನು ನಿಸರ್ಗದ ನೇಗಿಲು, ರೈತನ ಮಿತ್ರ, ಭೂಮಿಯ ಕರುಳು ಎಂದೆಲ್ಲಾ ಕರೆಯಲಾಗುತ್ತದೆ. ಕಬ್ಬಿನ ಗದ್ದೆಯಲ್ಲಿ ಎರೆಹುಳುಗಳು ಇದ್ದಾಗ ಇಳುವರಿ ಅಭೂತಪೂರ್ವವಾಗಿ ಹೆಚ್ಚಾಗುತ್ತದೆ. ಒಂದು ಪ್ರಯೋಗಿಕ ಪರಿಶೀಲನೆಯಂತೆ ಒಂದು ಎಕರೆ ಪ್ರದೇಶದಲ್ಲಿ 2 ಲಕ್ಷ ಎರೆಹುಳುಗಳು ಇದ್ದರೆ ಕಬ್ಬಿನ ಇಳುವರಿ 100 ಟನ್‌ಗೂ ಹೆಚ್ಚು ಬರುತ್ತದೆ ಎಂಬ ವಿಷಯ ಕೇಳಿದಾಗ ನಿಮಗೆ ಆಶ್ಚರ್ಯವಾಗಬಹುದು. ಆದರೆ ಇದು ಸತ್ಯ. ಸಾವಯವ ಕೃಷಿ ವಿಜ್ಞಾನ ಹೇಳುವಂತೆ ಎರೆಹುಳುವಿನ ಹಿಕ್ಕೆಗಳಲ್ಲಿ ಸಸ್ಯಕ್ಕೆ ಬೇಕಾದ ಎಲ್ಲಾ ಪೋಷಕಾಂಶಗಳು ಪ್ರಚೋದಕಗಳು ಎರೆಗೊಬ್ಬರದಲ್ಲಿ ಇವೆ. ಅಲ್ಲದೆ ಎರೆಹುಳುವಿನ ದೇಹದಿಂದ ಒಂದು ಬಗೆಯ ಅಂಟುದ್ರವ 24 ಗಂಟೆ ಹೊರಸೂಸುತ್ತದೆ. ಇದರಲ್ಲಿ ಸಸ್ಯಕ್ಕೆ ಬೇಕಾದ ಸೂಕ್ಷ್ಮಪೋಷಕಾಂಶಗಳು, ಚೋದಕಗಳು, ಅಮೈನೋ ಆಮ್ಲಗಳು ಇವೆ. ಒಂದು ಕ್ರಿಯಾಶೀಲ ಎರೆಹುಳು 24 ಗಂಟೆಯಲ್ಲಿ ತನ್ನ ಗಾತ್ರದ 5 ಪಟ್ಟು ಹಿಕ್ಕೆಗಳನ್ನು ಹಾಕಿ ಗೊಬ್ಬರ ಮಾಡಿಕೊಡುತ್ತದೆ. ಕಬ್ಬಿನ ಗದ್ದೆಯಲ್ಲಿ ಸಾವಯವ ತ್ಯಾಜ್ಯಗಳು ಹಾಗೂ ರವದಿಯನ್ನು ತಿಂದು ಮಣ್ಣಿನ ಫಲವತ್ತತೆಯನ್ನು ಸುಧಾರಿಸುತ್ತದೆ. ಕಬ್ಬಿಗೆ ನಿರಂತರವಾಗಿ ಪೋಷಕಾಂಶಗಳನ್ನು ಒದಗಿಸುತ್ತದೆ. ಮಣ್ಣಿನೊಂದಿಗೆ ಪ್ರತಿಕ್ಷಣ ತಮ್ಮ ಜೀವಮಾನವನ್ನು ಸವೆಸುತ್ತಾ ಸೈನಿಕರೋಪಾದಿಯಲ್ಲಿ ಸೇವೆ ಸಲ್ಲಿಸುತ್ತಿವೆ. ಎರೆಹುಳು ಮಣ್ಣಿಲ್ಲಿ ಸುಮಾರು 7 ರಿಂದ 8 ಅಡಿ ಆಳಕ್ಕೆ ಹೋಗಿ ಬರುತ್ತದೆ. ಹೋದ ದಾರಿಯಲ್ಲಿ ಬರುವುದಿಲ್ಲ.ಬಂದದಾರಿಯಲ್ಲಿಹೋಗುವುದಿಲ್ಲ. ಈ ರೀತಿ ಮಣ್ಣಿನಲ್ಲಿ ಹರಿದಾಡುವುದರಿಂದ ಗಾಳಿ ನುಗ್ಗಲು ಅವಕಾಶವಾಗುತ್ತದೆ. ಸಸ್ಯಗಳ ಬೇರು ಸಮೂಹ ಉಸಿರಾಟಕ್ಕೆ ಅನುಕೂಲವಾಗುತ್ತದೆ ಹಾಗೂ ಬೇರು ಸಮೂಹ ಸುಲಭವಾಗಿ ಮಣ್ಣಿನಲ್ಲಿ ಇಳಿಯಲು ಅನುಕೂಲವಾಗುತ್ತದೆ. ಎರೆಹುಳುಗಳು ನಿರಂತರವಾಗಿ ಮಣ್ಣಿನ ಫಲವತ್ತತೆಯನ್ನು ಸುಧಾರಿಸುತ್ತವೆ ಹಾಗೂ ಮಣ್ಣಿನ ಜೈವಿಕ ಪರಿಸರವನ್ನು ಅಭಿವೃದ್ಧಿಗೊಳಿಸುತ್ತವೆ. ಮಣ್ಣು ತೇವಾಂಶ ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ. ಈ ನಿಟ್ಟಿನಲ್ಲಿ ಕೂಳೆಕಬ್ಬು ಬೆಳೆಯುವಾಗ ಕಬ್ಬಿಗೆ ಅಗತ್ಯ ಪೋಷಕಾಂಶಗಳನ್ನು ನಿರಂತರವಾಗಿ ಒದಗಿಸುತ್ತದೆ. ಆದ್ದರಿಂದ ಕಬ್ಬಿನ ಗದ್ದೆಯಲ್ಲಿ ಎರೆಹುಳುಗಳು ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡಬೇಕು. ರವದಿಯನ್ನು ಸುಡಬಾರದು, ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಹಸಿರೆಲೆಗೊಬ್ಬರ ದ್ವಿದಳ ಧಾನ್ಯಗಳ ಮಲ್ಚಿಂಗ್, ಕೃಷಿ ತ್ಯಾಜ್ಯಗಳು, ಹಿಂಡಿಗಳು ಮುಂತಾದ ತ್ಯಾಜ್ಯಗಳನ್ನು ಮಣ್ಣಿಗೆ ಸೇರಿಸಬೇಕು. Dr. Soil ನಲ್ಲಿ ಸಾವಯವ ಇಂಗಾಲವಿರುವುದರಿಂದ ಎರೆಹುಳು ಹೆಚ್ಚು ಕ್ರಿಯಾಶೀಲವಾಗಿರುತ್ತವೆ. ಹೀಗೆ ಕ್ರಿಯಾಶೀಲ ಎರೆಹುಳು ಹಾಗು ಕ್ರಿಯಾಶೀಲ ಜೈವಿಕ ಪರಿಸರ ನಿರ್ಮಾಣದಿಂದ ಕೂಳೆಕಬ್ಬು ಯಶಸ್ವಿಯಾಗಿ ನಿರಂತರವಾಗಿ ಬೆಳೆಯಬಹುದು.



**ಎರೆಹುಳುಗಳಿಂದ ಕೂಡಿರುವ ಮಣ್ಣಿನ ಪೋಷಕಾಂಶಗಳು ಬೇರೆ ಮಣ್ಣುಗಳಿಗಿಂತ ಅತಿ ಹೆಚ್ಚಿರುತ್ತದೆ. ಸಾರಜನಕ 5 ಪಟ್ಟು, ರಂಜಕ 7 ಪಟ್ಟು, ಪಟ್ಯಾಶ್ 11 ಪಟ್ಟು ಮೆಗ್ನಿಶಿಯಂ ಎರಡುವರೆ ಪಟ್ಟು, ಸುಣ್ಣ 2 ಪಟ್ಟು ಹೆಚ್ಚಿರುತ್ತದೆ.**



## ಸಾವಯವ ಕೃಷಿ ಮಾಡಲು ಆಸೆ ಇತ್ತು, ಆದರೆ ಧೈರ್ಯ ಇರಲಿಲ್ಲ

# Dr. Soil ನಿಂದ ನನ್ನ ಆಸೆ ಈಡೇರಿದೆ

**ಈರಪ್ಪ ಮಡಿವಾಳಪ್ಪ ಹಾಲಳ್ಳಿ**
ಇಟ್ಟನಾಳ, ರಾಯಭಾಗ ತಾ., ಬೆಳಗಾಂ ಜಿಲ್ಲೆ.

Dr. Soil ಸಾವಯವ ಕೃಷಿಯಲ್ಲಿ ಕಬ್ಬಿನ ಕೃಷಿ ಸರಳ, ಸುಲಭ ಹಾಗೂ ಲಾಭದಾಯಕವಾಗಿ ಕೃಷಿ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ಕಾರಣವಾಗಿದೆ. ಇಂತಹ ಒಂದು ಬದಲಾವಣೆ Dr. Soil ನಿಂದ ಸಾಧ್ಯವಾಗಿದೆ.

ಇಂಥದೊಂದು ದಿನ ಬರುತ್ತದೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನನ್ನ ಕನಸಿನಲ್ಲಿಯೂ ಕೃಷಿ ಇಷ್ಟು ಸುಲಭವಾಗುತ್ತದೆ ಎಂದು ಎಣಿಸಿರಲಿಲ್ಲ. ಔಷಧ ತರೋದು, ಗೊಬ್ಬರ ಹಾಕಿಸೋದು, ಕೂಲಿಕೊಡೋದು, ನೀರು ಉಣಿಸುವುದು ಹೀಗೆ ಬಿಡುವಿಲ್ಲದ ಕೃಷಿ ಶ್ರಮದಿಂದ ಕೃಷಿಯಲ್ಲಿ ಸೋತುಹೋಗಿದ್ದರು. ಲಾಭದ ವಿಷಯ ಕೇಳೋ ಹಾಗಿರಲಿಲ್ಲ ಹೀಗೆ ಸಾಗಿತ್ತು ನನ್ನ ಕೃಷಿ ತಂಪು ಹೊತ್ತಿನಲ್ಲಿ ನೆನೆಯಬೇಕು ಪುಣ್ಯಾತ್ಮ ಶ್ರೀ ಕೆ.ಆರ್. ಹುಲ್ಲುನಾಚೇಗೌಡರು ನನಗೆ ಸಾವಯವ ಕೃಷಿಯ ಬಗ್ಗೆ ತಮ್ಮ ತರಭೇತಿಯಲ್ಲಿ ನಾನು ಎಂದೂ ಕೇಳಿರದ ಕೃಷಿ ಸತ್ಯಗಳನ್ನು ತಿಳಿಸಿಕೊಟ್ಟರು. ಅಂಗೈಯಲ್ಲಿ ಬೆಣ್ಣೆ ಇಟ್ಟುಕೊಂಡು ಊರೆಲ್ಲಾ ತುಪ್ಪಕ್ಕೆ ಓಡಾಡಿದರು ಎಂಬಂತಾಗಿದೆ ನಮ್ಮ ರೈತರ ಪರಿಸ್ಥಿತಿ. ರೈತರು ದಯಮಾಡಿ ಅರ್ಥಮಾಡಿಕೊಳ್ಳಬೇಕು. ನಮ್ಮ ಮಣ್ಣಿನಲ್ಲಿ ಟನ್‌ಗಟ್ಟಲೆ ರಂಜಕ, ಪೊಟ್ಯಾಶ್ ಹಾಗೂ ಸಸ್ಯಕ್ಕೆ ಬೇಕಾದ ಇತರ ಪೋಷಕಾಂಶಗಳಿವೆ. ಮಣ್ಣಿನಲ್ಲಿ ಜೈವಿಕ ಪರಿಸರ ನಿರ್ಮಾಣವಾಗಿ ಸೂಕ್ಷ್ಮಾಣುಜೀವಿಗಳು ರಂಜಕ ಮತ್ತು ಪೋಟ್ಯಾಶ್ ಕಣಗಳನ್ನು ಕರಗಿಸಿಕೊಡುತ್ತವೆ.

ವಾತಾವರಣದಲ್ಲಿ ಶೇ. 78.6 ಸಾರಜನಕವಿದೆ. ಆ ಪ್ರಾಕೃತಿಕ ಹಾಗೂ ಉಚಿತವಾಗಿ ಸಿಗುವ ಪೋಷಕಾಂಶಗಳನ್ನು ಸಸ್ಯಗಳಿಗೆ ಒದಗಿಸಿಕೊಡುವ ಕಲೆಯನ್ನು ರೈತರು ಕಲಿಯಬೇಕಿದೆ ಎಂದು ಮಕ್ಕಳಿಗೆ ಕಥೆ ಹೇಳುವ ಹಾಗೆ ನಮಗೆ ಸಾವಯವ ಕೃಷಿಯ ಬಗ್ಗೆ ಮಾಹಿತಿ ನೀಡಿದರು. ಆ ತರಬೇತಿಯ ನಂತರ ನಾನು ನನ್ನ ಇಡೀ 10 ಎಕರೆ ಕೃಷಿ ಭೂಮಿಯನ್ನು Dr. Soil ಸಾವಯವ ಕೃಷಿಗೆ ಬದಲಾಯಿಸಿ ಕಬ್ಬು ಮತ್ತು ಬಾಳೆ ಎರಡು ಬೆಳೆಗಳಿಗೆ Dr. Soil ನೀಡಿದ್ದೇನೆ. ಕಬ್ಬಿಗೆ ಮೂರೂವರೆ ತಿಂಗಳಾಗಿ ಬೆಳೆ ಬಹಳ ಹುಲುಸಾಗಿದೆ. ಹೆಚ್ಚು ಮರಿಗಳು ಬಂದಿವೆ. ಬಂದಿರುವ ಎಲ್ಲ ಮರಿಗಳು ಆರೋಗ್ಯವಾಗಿದೆ. ಬೆಳೆ ಬಹಳ ಸದೃಢವಾಗಿದೆ. ತಾಜಾ ತಿಳಿ ಹಸಿರು ಕಬ್ಬಿನ ತೋಟ ನೋಡಲು ಆನಂದವಾಗುತ್ತದೆ.

**ಕಲಿಯಿರಿ ಕಲಿಸಿರಿ**

### ಹಸಿರು ಕ್ರಾಂತಿ ಯಶಸ್ಸು ಮತ್ತು ಸಾವಯವ ಅಂಶ

ಕೃಷಿಯಲ್ಲಿ ಸಾವಯವ ಗೊಬ್ಬರಗಳ ಉಪಯೋಗ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದೆ. ರಸಗೊಬ್ಬರಗಳು ಬರುವುದಕ್ಕಿಂತ ಮೊದಲು ಸಾವಯವ ವಸ್ತುಗಳಿಂದ ಹಸಿರೆಲೆಗೊಬ್ಬರ ತರಗು ಕೃಷಿ ತ್ಯಾಜ್ಯ, ಕೊಟ್ಟಿಗೆ ಗೊಬ್ಬರ ಹಿಂಡಿ ಮುಂತಾದವುಗಳನ್ನು ಕೃಷಿಯಲ್ಲಿ ಬಳಸುತ್ತಿದ್ದರು. ಸಾವಯವ ಅಂಶಗಳು ಮಣ್ಣಿನಲ್ಲಿ ಹೆಚ್ಚಾಗಿದ್ದುದರಿಂದ ಭಾರತದ 1960ರ ದಶಕದಲ್ಲಿ ನಡೆದ ಹಸಿರು ಕ್ರಾಂತಿಯಲ್ಲಿ ಬಳಸಿದ ತಂತ್ರಜ್ಞಾನಗಳು ಅಭೂತ ಪೂರ್ವವಾಗಿ ಯಶಸ್ವಿಯಾದವು. ಆದರೆ ತದನಂತರದ ದಿನಗಳಲ್ಲಿ ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ ಕ್ರಮೇಣ ಹೆಚ್ಚಾಯಿತು. ಸಾವಯವ ಗೊಬ್ಬರಗಳ ಬಳಕೆ ಕ್ರಮೇಣ ಕಡಿಮೆಯಾಯಿತು. ಇಂದು ಅನೇಕ ರೈತರು ಸತತವಾಗಿ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಕೃಷಿ ಮಾಡುತ್ತಿದ್ದಾರೆ. ಇದರಿಂದ ಮಣ್ಣಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಗಳಲ್ಲಿ ಏರುಪೇರಾಗಿ ಮಣ್ಣು ಪ್ರಾಕೃತಿಕತೆಯನ್ನು ಕಳೆದುಕೊಂಡು ಮಲಿನವಾಗಿದೆ ಹಾಗೂ ಮಣ್ಣಿನಲ್ಲಿ ಸಾವಯವ ಅಂಶಗಳು ಕಡಿಮೆಯಾಗಿ ಮಣ್ಣಿನ ಜೈವಿಕ ಪರಿಸರ ಹಾಳಾಗಿ ಉತ್ಪಾದಕತೆಯು ಕಡಿಮೆಯಾಗಿ ವರ್ಷದಿಂದ ವರ್ಷಕ್ಕೆ ಕಬ್ಬಿನ ಇಳುವರಿ ಕಡಿಮೆಯಾಗುತ್ತಿದೆ ಮಣ್ಣು ಫಲವತ್ತಾಗಿದ್ದರೂ ಉತ್ಪಾದಕತೆ ಕಳೆದುಕೊಂಡಿರುವುದು ಎಂತಹ ವಿಪರ್ಯಾಸ. ಈ ನಿಟ್ಟಿನಲ್ಲಿ ಮಣ್ಣಿನಲ್ಲಿ ಪ್ರಾಕೃತಿಕ ಗುಣಗಳನ್ನು ಮರುಸೃಷ್ಟಿಸಲು Dr. Soil ದ್ರವರೂಪದ ಸಾವಯವ ಗೊಬ್ಬರ ಬಳಸಿಕೊಂಡು ಕಬ್ಬಿನ ಗದ್ದೆಗಳಲ್ಲಿ ಸಾವಯವ ಅಂಶ ಹೆಚ್ಚಿಸಿ ಕ್ರಮೇಣ ಇಳುವರಿ ಹೆಚ್ಚಿಸಿಕೊಳ್ಳಬಹುದು.

**1960ರ ದಶಕದ ಹಸಿರು ಕ್ರಾಂತಿ ಯಶಸ್ಸಿನ ಹಿಂದಿರುವ ರಹಸ್ಯ!!!**

**ನಿರಂತರವಾಗಿ ಬೆಳೆಸಿರಿ**

### ಸಾವಯವ ಕೃಷಿಯಲ್ಲಿ ಕೂಳೆ ಕಬ್ಬು

➲ 2ನೇ ಪುಟದಿಂದ...

**ಜಮೀನು ಹದಮಾಡುವುದು:**

ಕಬ್ಬು ಬಹುವಾರ್ಷಿಕ ಬೆಳೆಯಾಗಿರುವುದರಿಂದ ಕಬ್ಬು ನೆಡುವ ಜಮೀನನ್ನು ಚೆನ್ನಾಗಿ ಹದಮಾಡಬೇಕಾಗುತ್ತದೆ. ಕಬ್ಬು ಎತ್ತರಕ್ಕೆ ಬೆಳೆದು ಹೆಚ್ಚು ಕಾಲ ಜಮೀನಿನಲ್ಲಿ ರುವುದರಿಂದ ಆಳವಾದ ಉಳುಮೆ ಅತ್ಯಗತ್ಯ ಕಬ್ಬು ನೆಡುವ ಜಮೀನನ್ನು ಕಬ್ಬಿಣದ ನೇಗಿಲಿನಿಂದ ಅಥವಾ ಟ್ರಾಕ್ಟರ್ ಸಹಾಯದಿಂದ ಆಳವಾಗಿ ಉಳುಮೆ ಮಾಡಿ ರಂಟೆ ಹೊಡೆದು ಹೆಂಟೆಗಳಿದ್ದರೆ ಅವುಗಳನ್ನು ಪುಡಿ ಮಾಡಿ ಕಸಕಡ್ಡಿ ಆರಿಸಿ ಜಮೀನನ್ನು ಮಟ್ಟಮಾಡಿಟ್ಟುಕೊಳ್ಳಬೇಕು. ರಂಟೆ ಹೊಡೆಯುವ ಸಮಯದಲ್ಲಿ ಪ್ರತಿ ಹೆಕ್ಟೇರಿಗೆ 25 ಟನ್ ಚೆನ್ನಾಗಿ ಕಳಿತ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟನ್ನು ಮಣ್ಣಿನಲ್ಲಿ ಚೆನ್ನಾಗಿ ಬೆರೆಸಿರಬೇಕು. ತರುವಾಯ ರಿಡ್ಜರ್‌ನಿಂದ 90 ಸೆಂ.ಮೀ. ಅಂತರದಲ್ಲಿ ದೋಣಿ ಸಾಲು ಮಾಡಿ ಜಮೀನನ್ನು ಕಬ್ಬು ನೆಡಲು ಸಿದ್ಧವಾಗಿಟ್ಟುಕೊಳ್ಳಬೇಕು. ಸಾಲುಗಳ ನಡುವೆ ಅಂತರ ಕನಿಷ್ಠ 5 ರಿಂದ 6 ಅಡಿ ಇರಬೇಕು.

# ಜಾಗನೂರಿನಲ್ಲಿ ಸಾವಯವ ಕೃಷಿ ಜಾದು

ಕಲಿಯಿರಿ ಕಲಿಸಿರಿ

## ಕಬ್ಬಿನ ಗದ್ದೆಯಲ್ಲಿ ಇರಲಿ ಸೂಕ್ತ ಸಾವಯವ ಇಂಗಾಲ ಕಬ್ಬಿನ ಕೃಷಿಗೆ ಎಂದೂ ಬರುವುದಿಲ್ಲ ಬರಗಾಲ

ಕಬ್ಬಿನ ಕೃಷಿ ಚಟುವಟಿಕೆ ಆರಂಭವಾಗ ಬೇಕಾಗಿರುವುದು ಆರೋಗ್ಯಯುತ ಮತ್ತು ಉತ್ಪಾದನೆ ನೀಡಬಲ್ಲ ಮಣ್ಣಿನ ರಚನೆಯಿಂದ ಮಣ್ಣೆಂದರೆ ಶೇ.70% ಕಲ್ಲಿನ ಕಣಗಳು ಶೇ. 20% ನೀರು – ಗಾಳಿ ಶೇ.8 ರಷ್ಟು ಜೀವಾಣುಗಳು ಉಳಿದ ಶೇ.2 ರಷ್ಟು ಹಸಿರು ಮಣ್ಣು. ಅಥವಾ ಸಾವಯವ ಇಂಗಾಲವಿರಬೇಕು, ಸಾವಯವ ಇಂಗಾಲವು ಕೃಷಿ ಭೂಮಿಯಲ್ಲಿ ಬಿದ್ದ ನೀರನ್ನು ಹಿಡಿದಿಟ್ಟು ಪೋಲಾಗದೆ ಬೆಳೆಗಳ ಬೇರುಗಳಿಗೆ ಅದನ್ನು ಒದಗಿಸುವುದರಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಅಲ್ಲದೆ ಮಣ್ಣಿನಲ್ಲಿನ ಸೂಕ್ಷ್ಮಜೀವಿಗಳಿಗೆ ಆಶ್ರಯ ಹೊದಿಕೆಯಾಗಿ ಆಹಾರವನ್ನು ಒದಗಿಸುತ್ತದೆ ಹಾಗೂ ಎರೆಹುಳುಗಳು ಕ್ರಿಯಾಶೀಲವಾಗಿರಲು ಸಾವಯವ ಇಂಗಾಲ ಸಹಕಾರಿಯಾಗಿದೆ. ಆದ್ದರಿಂದ ಇದನ್ನು ಹೆಚ್ಚಿಸಲು ನಮ್ಮ ರವದಿ ಮತ್ತು ಕೃಷಿ ತ್ಯಾಜ್ಯಗಳನ್ನು ಸುಡದೆ ಪೋಲು ಮಾಡದೆ ಭೂಮಿಗೆ ಸೇರಿಸಬೇಕು. ಹಸಿರೆಲೆ – ತರಗೆಲೆ – ಕೊಟ್ಟಿಗೆ ಗೊಬ್ಬರ – ಗೋಡು ಮಣ್ಣುಗಳನ್ನು ಕೃಷಿ ಭೂಮಿಗೆ ಸೇರಿಸಬೇಕು. Dr. Soil ನಲ್ಲಿ ಸಾವಯವ ಇಂಗಾಲವಿರುವುದರಿಂದ Dr.Soil ಸಾವಯವ ಕೃಷಿಯಲ್ಲಿ ಮಣ್ಣಿನಲ್ಲಿ ಸೂಕ್ಷ್ಮಾಣುಜೀವಿಗಳು ಹಾಗೂ ಎರೆಹುಳುಗಳು ಬೇಗ ಕ್ರಿಯಾಶೀಲವಾಗಿ ಜೈವಿಕ ಪರಿಸರ ನಿರ್ಮಾಣವಾಗುತ್ತದೆ. ಮಣ್ಣು ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. Dr.Soil ಸಾವಯವ ಕೃಷಿಯಲ್ಲಿ ಈ ಬದಲಾವಣೆ ವೇಗವಾಗಿ ಆಗುವುದರಿಂದ ಮೊದಲನೆ ಬೆಳೆಯಿಂದಲೆ ಸಾವಯವ ಕೃಷಿಯು ಯಶಸ್ವಿಯಾಗಿಸಾಗುತ್ತದೆ.ಕಬ್ಬಿನಗದ್ದೆಯಲ್ಲಿ ರವದಿಯನ್ನು ಮುಚ್ಚಿಗೆ ಹಾಕುವುದು, ಬದುಗಳನ್ನು ಸುಭದ್ರವಾಗಿ ಹಾಕಿ ಮಣ್ಣು ಕೊಚ್ಚಿಕೊಂಡು ಹೋಗುವುದನ್ನು ತಡೆಗಟ್ಟುವುದು, ನೀರು ಹೆಚ್ಚು ನಿಲ್ಲದಂತೆ ನೋಡಿಕೊಳ್ಳುವುದು ನೀರನ್ನು ಸಾಕಷ್ಟು ಇಂಗುವಂತೆ ಮಾಡುವುದರಿಂದ ನಿರಂತರ ವಾಗಿ ಸಾವಯವ ಇಂಗಾಲವನ್ನು ಕಬ್ಬಿನ ಗದ್ದೆಯಲ್ಲಿ ಹೆಚ್ಚಿಸಿಕೊಂಡು ಹೋಗಬಹುದು. ಪ್ರತಿವರ್ಷ ಒಂದು ಎಕರೆ ಕೃಷಿ ಭೂಮಿಯಲ್ಲಿ 5 ರಿಂದ 10 ಟನ್ ಸಾವಯವ ಇಂಗಾಲವು ಜೀರ್ಣವಾಗಿ ಖನಿಜೀಕರಣವಾಗುತ್ತದೆ. ಇದು ಸಾಮಾನ್ಯ ಆದರೆ!!! ಇದರ ಜೊತೆಗೆ ರಾಸಾಯನಿಕ ಸಾರಜನಕಯುಕ್ತ ಗೊಬ್ಬರಗಳನ್ನು ಬಳಸಿದಾಗ ಸಾವಯವ ಇಂಗಾಲವು ಖನಿಜೀಕರಣಗೊಳ್ಳುವುದು ದ್ವಿಗುಣವಾಗುತ್ತದೆ. ಇದರಿಂದ ಮಣ್ಣು ಬೇಗ ಬರುಡಾಗುತ್ತದೆ. ಮಣ್ಣು ಬರುಡಾದರೆ ಕೂಳೆ ಕಬ್ಬಿನ ಬೆಳೆಯಿಂದ ಬೆಳೆಗೆ ಇಳುವರಿ ಕುಸಿಯುತ್ತದೆ. ಆದ್ದರಿಂದ ಮಣ್ಣಿನಲ್ಲಿ ಸೂಕ್ತ ಸಾವಯವ ಇಂಗಾಲ ಕಾಪಾಡಿಕೊಂಡು ಹೋಗುವುದು ಪ್ರತಿ ಬೆಳೆಗೆ ಕನಿಷ್ಠ ಒಂದು ಅಥವಾ ಎರಡು ಸಾರಿ Dr. Soil ಬಳಸುವುದರಿಂದ ಮಣ್ಣಿಗೆ ಸಾವಯವ ಇಂಗಾಲ ಮರುಪೂರಣವಾಗಿ ಮಣ್ಣಿನ ಜೈವಿಕ ಪರಿಸರ ಹೆಚ್ಚು ಕ್ರಿಯಾಶೀಲವಾಗುತ್ತದೆ. ಕೂಳೆಕಬ್ಬು ಯಶಸ್ವಿಯಾಗಿ ಬೆಳೆಯುತ್ತದೆ. ಉತ್ತಮ ಇಳುವರಿ ನಿಮ್ಮದಾಗುತ್ತದೆ.

ನನ್ನ ಹದಿನೈದು ವರ್ಷದ ಕೃಷಿ ಅನುಭವದಲ್ಲಿ ನಾನು ನೋಡಿದ ಅದ್ಭುತ ಬೆಳೆ. ನನ್ನ ಕಬ್ಬಿನ ತೋಟದಲ್ಲಿ ಬಂದಿದೆ. ನಾಲ್ಕೂವರೆ ತಿಂಗಳ ಕಬ್ಬಿನ ಗದ್ದೆಯಲ್ಲಿ 12–15 ಗಣಕೆ ಬಂದಿದೆ. Dr. Soil ಬಳಕೆಯಿಂದ ಕಬ್ಬಿನ ಗದ್ದೆಯಲ್ಲಿ ಆದ ಬದಲಾವಣೆಗಳನ್ನು ಕಂಡು ನೀವು ಸಹ ಬೆರಗಾಗಬಹುದು.



Dr. Soil ಕೃಷಿಯಿಂದ ಕಬ್ಬಿನ ಕೃಷಿಯಲ್ಲಿ ಆದ ಜಾದು ಬದಲಾವಣೆಗಳನ್ನು ರೈತರು ಕಂಡಂತೆ.

Dr. Soil ಜಾದು ಶ್ರದ್ಧೆಯಿಂದ ಓದು

**ಮಾರುತಿ ಭೀಮಪ್ಪ ಹಂಚಿ,**
**ಜಾಗನೂರು, ಚಿಕ್ಕೋಡಿ ತಾ. ಬೆಳಗಾಂ ಜಿಲ್ಲೆ.**

- Dr. Soil ಬಳಸಿದ ನಂತರ ಮಣ್ಣು ಬಹಳ ಮೃದುವಾಗಿದೆ.
- ಮಣ್ಣಿನಲ್ಲಿ ಹೊಸ ಬೇರುಗಳ ಸಮೂಹ ಸಮೃದ್ಧಿಯಾಗಿ ಆರೋಗ್ಯವಾಗಿ ಬೆಳೆದಿವೆ.
- ಮಣ್ಣಿನಲ್ಲಿ ಎರೆಹುಳುಗಳು ಸಮೃದ್ಧಿಯಾಗಿ ಬಂದಿವೆ.
- ಮಣ್ಣು ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚಾಗಿದೆ. ಹಾಗಾಗಿ 15 ದಿನಕ್ಕೆ ಒಮ್ಮೆ ನೀರು ಕೊಡಲಾಗುತ್ತದೆ.
- ಕಬ್ಬಿನ ಮರಿಗಳು ಸಾಕಷ್ಟು ಬಂದಿವೆ.
- ಬಂದಿರುವ ಕಬ್ಬಿನ ಮರಿಗಳು ಸದೃಢವಾಗಿವೆ ಹಾಗೂ ಆರೋಗ್ಯಪೂರ್ಣವಾಗಿವೆ.
- ಬೆಳೆ ಬಹಳ ತಾಜಾ ಇದ್ದು ತಿಳಿ ಹಸಿರಿನಿಂದ ಕೂಡಿ ಕಂಗೊಳಿಸುತ್ತಿದೆ.
- ಹೆಚ್ಚು ಕಸ Dr. Soil ಬಳಸಿದ ನಂತರ ಬಂದಿಲ್ಲ.
- ದಳಗಳು ಸದೃಢವಾಗಿ ಆರೋಗ್ಯಪೂರ್ಣವಾಗಿ ಬಾಗಿವೆ.
- ದಳಗಳು ಮೃದುವಾಗಿದ್ದು ಕೊಯ್ಯಂಗಿಲ್ಲ.
- ಜೈವಿಕ ತ್ಯಾಜ್ಯಗಳು ಹಾಗೂ ರವದಿ ಚೆನ್ನಾಗಿ ಮಣ್ಣಿನಲ್ಲಿ ಕರಗುತ್ತಿದೆ.
- ಬಿಳಿಚು ರೋಗ ನಿವಾರಣೆಯಾಗಿದೆ.
- ಸುಳಿರೋಗ ಈ ಬಾರಿ ಬಂದಿಲ್ಲ.
- ದೊಣ್ಣೆ ಹುಳು ನಾಶವಾಗಿದೆ.

### Dr. Soil Super, ಬೆಳೆ ಬಂಪರ್

ಪ್ರತಿ ವರ್ಷ ರೋಗಗಳು ಬರ್‍ತಾ ಇತ್ತು. ಈ ಭಾರಿ ಬಂದಿಲ್ಲ. ನಾನು ಯಾವುದೇ ಸಿಂಪರಣೆ ಮಾಡಿಲ್ಲ. ನನ್ನ ಜೀವನದಲ್ಲಿ ಇಂಥಾ ಸಮೃದ್ಧಿ ಬೆಳೆ ನಾನು ನೋಡಿಲ್ಲ. ಕಬ್ಬಿನ ಕೃಷಿಯಲ್ಲಿ ಅಂತರ ಬೆಳೆಯಾದ ಗೋವಿನ ಜೋಳ ದಾಖಲೆ ಬೆಳೆ ಬಂದಿದೆ. ನನ್ನ ಅರಿಶಿಣ ಬೆಳೆಗೂ Dr. Soil ಬಳಸಿದ್ದೇವೆ. ಆ ಸಮೃದ್ಧಿ ಬೆಳೆ ನೋಡಲು ಎರಡು ಕಣ್ಣು ಸಾಲದು. Dr. Soil ಬಗ್ಗೆ ಶಿಕ್ಷಣ ನೀಡುತ್ತಿರುವ ಕೆ.ಆರ್.ಹುಲ್ಲುನಾಚೇಗೌಡರಿಗೆ ನನ್ನ ಅಂತರಾಳದ ಶುಭ ಹಾರೈಕೆಗಳು.

## ಸಮೃದ್ಧ ಸಾವಯವ ಅರಿಶಿಣ ಖರ್ಚು ಮಾಡಿಲ್ಲ, ಹೆಚ್ಚಿಗೆ ಹಣ

**ಹಾಲಪ್ಪ ಮೂಶಪ್ಪಗೋಳ (ಯಾದವಾಡಿ)**
**ಜಾಗನೂರು, ಚಿಕ್ಕೋಡಿ ತಾಲ್ಲೂಕು, ಬೆಳಗಾಂ ಜಿಲ್ಲೆ.**

ನಾನು ಡಾ.ಸಾಯಿಲ್‌ನಿಂದ ಬೀಜೋಪಚಾರ ಮಾಡಿ ನಾಟಿ ಮಾಡಿದ ನಂತರ ಎಕರೆಗೆ 50 ಲೀಟರ್ ಡಾ ಸಾಯಿಲ್ ಬಳಸಿರುವುದನ್ನು ಬಿಟ್ಟರೆ ಬೇರೆ ಯಾವುದೇ ಸಿಂಪರಣೆಗಳು ಮಾಡಿಲ್ಲ, ಯಾವುದೇ ರೋಗಬಾಧೆ ಇಲ್ಲ. ಖರ್ಚು ಬಹಳ ಕಡಿಮೆಯಾಗಿದೆ. ಬೆಳೆ ರಾಸಾಯನಿಕ ಪದ್ಧತಿಗಿಂತಲೂ ಹೆಚ್ಚು ಸಮೃದ್ಧಿಯಾಗಿದೆ. ಡಾ. ಸಾಯಿಲ್‌ನಿಂದ ಬೀಜೋಪಚಾರ ಅರಿಶಿಣಕ್ಕೆ ರೋಗಗಳಿಂದ ಪರಿಹಾರ.

ಜಾದೂಬೆಳೆ, ನೋಡಿದರೆ ನಮ್ಮ ಕಣ್ಣು ತಂಪಾಗುತ್ತದೆ. ಎಲೆಗಳು ಎಷ್ಟು ತಾಜಾ ಹಸಿರಿನಿಂದ ಕಂಗೊಳಿಸುತ್ತಿದೆ ಎಂದರೆ ಆ ಸುಖ ನೋಡಿಯೇ ಅನುಭವಿಸಬೇಕು. ಶ್ರೀ ಕೆ.ಆರ್. ಹುಲ್ಲು ನಾಚೇಗೌಡರ ಮಾರ್ಗದರ್ಶನದಲ್ಲಿ ಈ ಬಾರಿ ನಾವು ಡಾ ಸಾಯಿಲ್ ಸಾವಯವ ಕೃಷಿ ಪದ್ಧತಿಯಲ್ಲಿ ಅರಿಶಿಣ ಬೆಳೆಯುತ್ತಿದ್ದೇವೆ. ಎರಡೂವರೆ ತಿಂಗಳು ಆಗಿದೆ, ಬೆಳೆ ಬಹಳ ಸದೃಢವಾಗಿದೆ. ಎಲೆಗಳು ಆರೋಗ್ಯವಾಗಿ ದಷ್ಟ ಪುಷ್ಟವಾಗಿವೆ. ಬೆಳೆ ಬಹಳ ಆರೋಗ್ಯವಾಗಿದೆ. ನಾವು ಡಾ ಸಾಯಿಲ್ ಅರಿಶಿಣ ಬೆಳೆಗೆ ಬಳಸಿದ ನಂತರ ಮಣ್ಣು ಬಹಳ ಮೃದುವಾಗಿದೆ. ಬೇರುಗಳು ಆರೋಗ್ಯಪೂರ್ಣವಾಗಿದೆ. ಯಾವುದೇ ರೋಗ ಬಾಧೆ ಕಂಡುಬಂದಿಲ್ಲ. ಮಣ್ಣಿನಲ್ಲಿ ಸಮೃದ್ಧಿಯಾಗಿ ಎರೆಹುಳು ಕಂಡುಬಂದಿವೆ. ದೊಣ್ಣೆ ಹುಳು ನಾಶವಾಗಿವೆ. ಹೆಚ್ಚಿಗೆ ನೀರು ಕೊಡುವ ಅವಶ್ಯಕತೆ ಇಲ್ಲ. ಕಸ ಹೆಚ್ಚಿಗೆ ಬಂದಿಲ್ಲ. ಯಾವುದೇ ಸಿಂಪರಣೆಗಳು ಮಾಡಿಲ್ಲ. ಯಾವುದೇ ರಸ ಗೊಬ್ಬರಗಳನ್ನು ಬಳಸಿಲ್ಲ. ಒಂದು ಸಾರಿ ಎಕರೆಗೆ 50 ಲೀಟರ್ ಡಾ. ಸಾಯಿಲ್ ನೀಡಿದ್ದೇನೆ. ಕೆಲಸ ಕಡಿಮೆಯಾಗಿದೆ. ಕೃಷಿಯ ಮೇಲೆ ಒತ್ತಡ ಇಲ್ಲ. ಮನಸ್ಸಿಗೆ ನೆಮ್ಮದಿಯಿದೆ. ನನ್ನಲ್ಲಿ ಸಾವಯವ ಕೃಷಿ ಆತ್ಮ ವಿಶ್ವಾಸ ಹೆಚ್ಚಿದೆ. ರಾಸಾಯನಿಕ ಮುಕ್ತ ಸಾವಯವ ಅರಿಶಿಣಕ್ಕೆ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಬಾರಿ ಬೇಡಿಕೆ ಇದೆ. ನಾನು ಸಾವಯವ ಕೃಷಿಕ ಪ್ರಮಾಣ ಪತ್ರ ,ಪಡೆದುಕೊಂಡು ವಿಷಮುಕ್ತ ಸಾವಯವ ಅರಿಶಿಣ ಬೆಳೆಯಬಹುದೆಂಬ ದೃಢ ವಿಶ್ವಾಸ ಬಂದಿದೆ. ಅರಿಶಿಣ ಬೆಳೆಯುವ ಕೃಷಿಕರ ಪಾಲಿಗೆ ಡಾ. ಸಾಯಿಲ್ ಒಂದು ವರದಾನವಾಗಿದೆ.



# ಸಾವಯವ ಕೃಷಿ ಜಾತ್ರೆಯಾದ ಕ್ಷೇತ್ರೋತ್ಸವ

ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಜೀವಂತ ಸಾಕ್ಷಿ ಶ್ರೀ ಕೆ.ಆರ್.ಹುಲ್ಲುನಾಚೇಗೌಡರು. ರೈತರ ಮಗನಾಗಿ ಹುಟ್ಟಿ ಕೃಷಿಯ ಕಷ್ಟ ಸುಖಗಳನ್ನು ಅರಿತು, ಕೃಷಿಯಲ್ಲಿ ಪದವಿಯನ್ನು ಪಡೆದು ಕೃಷಿಯ ನೂರಾರು ಸಮಸ್ಯೆಗಳಿಗೆ ಪರಿಹಾರವಾಗಿ ಯಶಸ್ವಿ ಸಾವಯವ ಕೃಷಿಗಾಗಿ Dr. Soil ದ್ರವರೂಪದ ಸಾವಯವ ಗೊಬ್ಬರ ಅಭಿವೃದ್ಧಿಪಡಿಸಿ ಕಬ್ಬಿನ ಕೃಷಿ ಹಾಗೂ ರೈತರ ಏಳಿಗೆಗಾಗಿ ಹಗಲಿರುಳು ರೈತರ ತೋಟ ಬದುಗಳ ಮೇಲೆ ನಿಂತು ಸಾವಯವ ಕೃಷಿ ಶಿಕ್ಷಣ ನೀಡಿ ನೂರಾರು ರೈತರಿಂದ ಕಬ್ಬಿನ ಕೃಷಿ ಪ್ರಾತ್ಯಕ್ಷಿಕೆಗಳನ್ನು ಮಾಡಿಸಿ ರೈತರಿಂದ ರೈತರಿಗಾಗಿ ರೈತರಿಗೋಸ್ಕರ ಪರಸ್ಪರ ರೈತರೇ ಕೃಷಿ ಸತ್ಯವನ್ನು ಅರಿತುಕೊಳ್ಳಲು ಮಾರ್ಗದರ್ಶನ ಮಾಡಿ ಇಂದು ಸಾವಿರಾರು ರೈತರು ವಿಷಮುಕ್ತ, ರಾಸಾಯನಿಕ ಮುಕ್ತ ಕೃಷಿ ಮಾಡುತ್ತಿರುವುದು ಒಂದು ದಾಖಲೆಯೇ ಸರಿ. ಈ ಸಂತಸದಾಯಕ ಬೆಳವಣಿಗೆಯಿಂದ ಉತ್ಸಾಹ ತುಂಬಿದ ರೈತರು ಆಯೋಜಿಸಿಕೊಂಡ ಕಾರ್ಯಕ್ರಮವೇ ರಾಯಭಾಗ ತಾಲ್ಲೂಕು ಕಟಕಬಾವಿ ಶ್ರೀ ದೇಸಾಯಿಸರ್‌ರವರ ಕಬ್ಬಿನ ಕೃಷಿಯ ಕ್ಷೇತ್ರೋತ್ಸವ.



ಸನ್ಮಾನ ಸ್ವೀಕರಿಸುತ್ತಿರುವ ಸಾವಯವ ತಜ್ಞ ಶ್ರೀ ಕೆ.ಆರ್. ಹುಲ್ಲು ನಾಚೇಗೌಡರು.

**ರೈತರಿಂದ, ರೈತರಿಗಾಗಿ, ರೈತರಿಗೋಸ್ಕರ, ರೈತರೇ ಆಯೋಜಿಸಿ ಕೊಂಡ ಅದ್ಭುತ ಕಾರ್ಯಕ್ರಮ**

ಇಂದಿನ ಎಲ್ಲಾ ಕೃಷಿ ಸಮಸ್ಯೆಗಳಿಗೆ ಮಣ್ಣಿನ ಮಾಲಿನ್ಯವೇ ಕಾರಣವಾಗಿದೆ. ಮಣ್ಣು ಒಂದು ಜೀವಂತ ವಸ್ತು. ಮಣ್ಣಿನಲ್ಲಿ ಕಣ್ಣಿಗೆ ಕಾಣದ ಕೋಟ್ಯಾನುಕೋಟಿ ಸೂಕ್ಷ್ಮಾಣುಜೀವಿಗಳು ಹಾಗೂ ರೈತನ ಮಿತ್ರ ಎರೆಹುಳು ಮಣ್ಣಿನಲ್ಲಿ ಇರಬೇಕು. ಆದರೆ ಕೃಷಿಯಲ್ಲಿ ರಸಗೊಬ್ಬರಗಳು ಹಾಗೂ ರಾಸಾಯನಿಕಗಳ ಬಳಕೆಯನ್ನು ಕಲಿತುಕೊಂಡ ನಾವು ಅಗತ್ಯಕ್ಕಿಂತ ಹೆಚ್ಚಿಗೆ ರಾಸಾಯನಿಕಗಳನ್ನು ಕೃಷಿಯಲ್ಲಿ ಬಳಸಿ ವಾಯುಮಾಲಿನ್ಯ, ಜಲಮಾಲಿನ್ಯ ಹಾಗೂ ಮಣ್ಣಿನ ಮಾಲಿನ್ಯ ನಿರಂತರವಾಗಿ ಹೆಚ್ಚಲು ನಾವೇ ಕಾರಣವಾಗಿದ್ದೇವೆ. ಕೃಷಿಯಲ್ಲಿ ರಾಸಾಯನಿಕಗಳ, ಸಿಂಪರಣೆಗಳ ಬಳಕೆಯಿಂದ ಅಸಂಖ್ಯಾ ಜೀವರಾಶಿಗಳು ನಾಶವಾಗುತ್ತಿವೆ. ಕೃಷ್ಣಾ ಮತ್ತು ಕಾವೇರಿ ನದಿಪಾತ್ರದ ಕೃಷಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮ ಹಿರಿಯರು ಎಂದೂ ಈ ಮಟ್ಟಿಗೆ ಮಣ್ಣನ್ನು ಮಲಿನ



ಸಾವಿರಾರು ರೈತರು ಸಾಕ್ಷಿಯಾದ ಯಶಸ್ವಿ ಸಾವಯವ ಕ್ಷೇತ್ರೋತ್ಸವದಲ್ಲಿ ಸಾವಯವ ಕಬ್ಬು ಕೃಷಿಯ ಬಗ್ಗೆ ಮಾಹಿತಿ ನೀಡುತ್ತಿರುವ ಸಾವಯವ ತಜ್ಞ ಶ್ರೀ ಕೆ.ಆರ್. ಹುಲ್ಲು ನಾಚೇಗೌಡರು.

ಮಾಡಲಿಲ್ಲ. ಹೆಚ್ಚು ಇಳುವರಿ ಹಾಗೂ ಕೃಷಿ ಅಭಿವೃದ್ಧಿ ಸಾಧಿಸಲು ಮಣ್ಣನ್ನು ಮಲಿನ ಮಾಡುವ ಅವಶ್ಯಕತೆ ಇಲ್ಲ. ಮಣ್ಣು ಆರೋಗ್ಯವಾಗಿದ್ದರೆ ಬೆಳೆ ಆರೋಗ್ಯವಾಗಿರುತ್ತದೆ. ಸಮೃದ್ಧ ಫಸಲು ಮಣ್ಣಿನ ಆರೋಗ್ಯದಲ್ಲಿ ಅಡಗಿದೆ. ಮೊದಲು ಮಣ್ಣನ್ನು ಫಲವತ್ತತೆಗೊಳಿಸಿ ಬೆಳೆ ತಾನಾಗಿಯೇ ಬರುತ್ತದೆ. ಜೀವಂತ ಮಣ್ಣು ಹೊನ್ನು. ಈ ನಿಟ್ಟಿನಲ್ಲಿ ರೈತರು ಪ್ರಕೃತಿ ಸ್ನೇಹಿ, ರೈತ ಸ್ನೇಹಿ, ಸಾವಯವ ಕೃಷಿಗೆ ಮುಂದಾಗಬೇಕು. ಮಣ್ಣಿನ ಮಾಲಿನ್ಯ ನಿವಾರಣೆಯಾಗದ ಹೊರತು ರೈತರ ಸಮಸ್ಯೆಗಳು ನಿವಾರಣೆಯಾಗುವುದಿಲ್ಲ. ಕೃಷಿಯಲ್ಲಿ ಖರ್ಚು ದಿನೇ ದಿನೇ ಏರಿಕೆಯಾಗುತ್ತಿದ್ದು ಕೃಷಿ ಜಟಿಲವಾಗಿ ರೈತರು ಕೃಷಿಯಿಂದ ದೂರ ಸರಿಯುತ್ತಿರುವುದು ತುಂಬಾ ಆತಂಕಕಾರಿಯಾಗಿದೆ. ಇದಕ್ಕೆಲ್ಲಾ ಪರಿಹಾರವೇ ಸಾವಯವ ಕೃಷಿ ಪ್ರಕೃತಿ ಜೊತೆ ಪ್ರಕೃತಿಗೆ ಪೂರಕವಾಗಿ ಸಾಗುವ ಕೃಷಿ.

ಪ್ರಕೃತಿಯಲ್ಲಿ ಅಪಾರವಾದ ಶಕ್ತಿ ಇದೆ. ಕೃಷಿಯಲ್ಲಿ ಪ್ರಾಕೃತಿಕ ಶಕ್ತಿಗಳನ್ನು ಸಮರ್ಪಕವಾಗಿ ರೈತರು ಬಳಸಿಕೊಳ್ಳಬೇಕು ಪ್ರಕೃತಿಗೆ ಪೂರಕವಾಗಿ ಕೃಷಿ ಸಾಗಬೇಕು.

ವಾತಾವರಣದಲ್ಲಿ ಶೆ.78.6 ರಷ್ಟು ಸಾರಜನಕವಿದೆ. ಅನಿಲರೂಪದಲ್ಲಿ ಇರುವ ಸಾರಜನಕ ಮೂಟೆ ಲೆಕ್ಕಕ್ಕೆ ತೆಗೆದುಕೊಂಡರೆ ಒಂದು ಹೆಕ್ಟರ್‌ಗೆ 86,000 ಟನ್‌ಗಳಷ್ಟು ಸಾರಜನಕವಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇಷ್ಟೊಂದು ಪ್ರಮಾಣದ ಸಾರಜನಕ ನಮ್ಮ ಹೊಲದಲ್ಲಿ ಇರುವಾಗ ನಾವೇಕೆ ಹೊರಗಡೆಯಿಂದ ಸಾರಜನಕ ತಂದು ಹಾಕುತ್ತಿದ್ದೇವೆ? ನಮ್ಮ ಬೆಳೆಗಳು ವಾತಾವರಣದಲ್ಲಿನ ಸಾರಜನಕ ಬಳಸಿಕೊಂಡು ಏಕೆ ಸಮೃದ್ಧಿಯಾಗಿ ಬೆಳೆಯುತ್ತಿಲ್ಲ? ಈ ಪ್ರಶ್ನೆಗಳು ನಮ್ಮನ್ನು ಕಾಡಬಹುದು. ಸಸ್ಯಗಳು ವಾತಾವರಣದಿಂದ ನೇರವಾಗಿ ಸಾರಜನಕ ತೆಗೆದುಕೊಳ್ಳಲು ಆಗುವುದಿಲ್ಲ. ಯಾವ ಮಣ್ಣಿನಲ್ಲಿ ಜೈವಿಕ ಪರಿಸರ ಆರೋಗ್ಯವಾಗಿದ್ದು ಸಾರಜನಕ ಸ್ಥಿರೀಕರಣ ಮಾಡುವ ಸೂಕ್ಷ್ಮಾಣುಜೀವಿಗಳು ಇರುತ್ತವೆಯೋ ಆ ಮಣ್ಣಿನಲ್ಲಿ ಬೆಳೆದ ಬೆಳೆಗೆ ವಾತಾವರಣದಿಂದ ಅನಾಯಾಸವಾಗಿ ಸಾರಜನಕ ಸಮೃದ್ಧಿಯಾಗಿ ಸಿಗುತ್ತದೆ. ಅದಕ್ಕಾಗಿ ಮಣ್ಣಿನಲ್ಲಿ ಸೂಕ್ತ ಜೈವಿಕ ಪರಿಸರ ನಿರ್ಮಾಣ ರೈತರ ಗುರಿಯಾಗಬೇಕು. ಮಣ್ಣಿನಲ್ಲಿ ಹಾಗೂ ಎಲ್ಲಾ ಜೈವಿಕ ತ್ಯಾಜ್ಯಗಳಲ್ಲಿ ಟನ್‌ಗಟ್ಟಲೆ ರಂಜಕ, ಪೊಟ್ಯಾಶ್ ಹಾಗೂ ಎಲ್ಲಾ ರೀತಿಯ ಲಘು ಪೋಷಕಾಂಶಗಳಿವೆ. ಆದರೆ! ಸಂಕೀರ್ಣರೂಪದಲ್ಲಿ ಇರುವ ಪೋಷಕಾಂಶಗಳನ್ನು ಕರಗಿಸಿ ಸಸ್ಯಕ್ಕೆ ಒದಗಿಸಿಕೊಡುವ ಸೂಕ್ಷ್ಮಾಣುಜೀವಿಗಳು ಮಣ್ಣಿನಲ್ಲಿ ಇಲ್ಲದಿರುವುದೇ ಇಂದಿನ ಎಲ್ಲಾ ಸಮಸ್ಯೆಗಳಿಗೆ ಪ್ರಮುಖವಾದ ಕಾರಣವಾಗಿದೆ. ಸಾರಜನಕ ಸ್ಥಿರೀಕರಣ ಮಾಡುವ ರೈಜೊಬಿಯಂ, ಅಜೋಸ್ಪರಲಿಂ, ಮುಂತಾದವು ರಂಜಕ ಕರಗಿಸಿಕೊಡುವ PSB ಬ್ಯಾಕ್ಟೀರಿಯಾ, ಪೊಟ್ಯಾಶ್ ಕರಗಿಸಿಕೊಡುವ ಬ್ಯಾಸಿಲಸ್ ಸಿಲಿಕಸ್ ನಂತಹ ಸೂಕ್ಷ್ಮಾಣುಜೀವಿಗಳು ಮತ್ತು ಎರೆಹುಳು ಮಣ್ಣಿನ ಜೈವಿಕ ಪರಿಸರದಲ್ಲಿ ಇದ್ದರೆ ಸಸ್ಯಕ್ಕೆ ಸಮೃದ್ಧಿಯಾಗಿ ಸಾವಯವ N.P.K ಸಿಗುತ್ತವೆ ಎಂಬ ಸತ್ಯವನ್ನು ರೈತರು ಅರ್ಥಮಾಡಿಕೊಂಡು ಮಣ್ಣಿನ ಮಾಲಿನ್ಯ ನಿವಾರಣೆ ಮಾಡಿ ಮಣ್ಣಿನಲ್ಲಿ ಜೈವಿಕ ಪರಿಸರ ಮರು ಸೃಷ್ಟಿ ಮಾಡಬೇಕು. ಈ ನಿಟ್ಟಿನಲ್ಲಿ ರೈತರು ಸಾವಯವ ಕೃಷಿಗೆ ಮುಂದಾಗಬೇಕು ಎಂದು ಕರೆ ಮಾಡಿದರು. ರಾಸಾಯನಿಕ ಕೃಷಿಯಲ್ಲಿ ವರ್ಷದಿಂದ ವರ್ಷಕ್ಕೆ ಕಬ್ಬಿನ ಇಳುವರಿ ಕುಸಿಯುತ್ತಿದ್ದು ಎಕರೆಗೆ 25 ರಿಂದ 35 ಟನ್ ಇಳಿದಿರುವುದು ಆತಂಕಕಾರಿ. ಕೆಲವು ಮಣ್ಣುಗಳಲ್ಲಿ ಸವಳು ಜವಳಾಗಿ ಬೆಳೆ ಬೆಳೆಯಲಾಗದ ಸ್ಥಿತಿಗೆ ತಲುಪಿದೆ. ಆದರೆ ಸಾವಯವ ಕೃಷಿಯಲ್ಲಿ ವರ್ಷವರ್ಷಕ್ಕೆ ಇಳುವರಿ ಹೆಚ್ಚುತ್ತಾ ಸಾಗುತ್ತದೆ. ಎಕರೆಗೆ 100 ಟನ್ ಕಬ್ಬು ಬೆಳೆಯುವುದು. ಸಾವಯವ ಕೃಷಿಯಲ್ಲಿ ದೊಡ್ಡ ವಿಷಯವೇ ಅಲ್ಲ ಎಂದು ಹೇಳಿದರು.

**ಮಣ್ಣಿನ ಮಾಲಿನ್ಯ ನಿಲ್ಲಲಿ ರೈತ ಮತ್ತೆ ಗೆಲ್ಲಲಿ**

ಸಾವಯವ ಕೃಷಿಯಲ್ಲಿ ಬೆಳೆಗಳಿಗೆ ಹೆಚ್ಚಿಗೆ ರೋಗ ರುಜಿನಗಳು ಬರುವುದಿಲ್ಲ. ಸಸ್ಯಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಅನಾವಶ್ಯಕ ಸಿಂಪರಣೆಗಳು ಖರ್ಚುಗಳು ಕಡಿಮೆಯಾಗುತ್ತವೆ. ಈ ನಿಟ್ಟಿನಲ್ಲಿ ರೈತರು ವೈಜ್ಞಾನಿಕವಾಗಿ ಸಾವಯವ ಕೃಷಿ ತಂತ್ರಗಳನ್ನು ಕಲಿಯಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ. ಮಣ್ಣಿನ ಮಾಲಿನ್ಯ ನಿವಾರಣೆಯಾಗಿ ಕೃಷಿಯಲ್ಲಿ ರೈತ ಮತ್ತೆ ಗೆಲ್ಲಲಿ ಎಂಬುದು ನನ್ನ ತುಂಬು ಹೃದಯದ ಆಶಯವಾಗಿದೆ.



ಸಸ್ಯ ಸಂಜೀವಿನಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ವತಿಯಿಂದ ನಡೆದ ಸಾವಯವ ಕೃಷಿ ಕ್ಷೇತ್ರೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸುತ್ತಿರುವ ಯಶಸ್ವಿ ಸಾವಯವ ಕಬ್ಬು ಬೆಳೆಗಾರರು.

**ಕಲಿಯಿರಿ ಕಲಿಸಿರಿ**

## ಕಬ್ಬಿನ ಗದ್ದೆಯಲ್ಲಿ ಇರಲಿ ರವದಿ ಮುಚ್ಚಿಗೆ ಮುಚ್ಚಿಗೆಯ ಬಿಸಿ ಅಪ್ಪುಗೆಯಿಂದ ಕಬ್ಬಿನ ಇಳುವರಿ ಹೆಚ್ಚಿಗೆ

ಕಬ್ಬಿನ ಕೃಷಿಯಲ್ಲಿ ಸುಸ್ಥಿರತೆ ಸಾಧಿಸಬೇಕಾದರೆ ಮಣ್ಣಿನಲ್ಲಿ ಸೂಕ್ಷ್ಮಾಣುಜೀವಿಗಳ ಚಟುವಟಿಕೆಗಳನ್ನು ಉತ್ಕೃಷ್ಟಮಟ್ಟದಲ್ಲಿ ಇರುವಂತೆ ನೋಡಿಕೊಳ್ಳಬೇಕು, ಸೂಕ್ಷ್ಮಾಣುಜೀವಿಗಳು ಮಣ್ಣಿನ ಮೆಲ್ಪದರದ ಒಂದು ಅಂಗುಲದಲ್ಲಿ ಹೆಚ್ಚು ಕ್ರಿಯಾಶೀಲವಾಗಿರುತ್ತವೆ. ಪ್ರಕರವಾದ ಸೂರ್ಯನ ನೀಲಾತೀತ ಕಿರಣಗಳು ನೇರವಾಗಿ ಮಣ್ಣಿನ ಮೇಲೆ ಬಿದ್ದಾಗ ಸೂಕ್ಷ್ಮಾಣುಜೀವಿಗಳ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಕಬ್ಬಿನ ಕೃಷಿಯಲ್ಲಿ ಇಳುವರಿ ಹೆಚ್ಚಿಸಿಕೊಳ್ಳಲು ರೈತರು ಉಪಯೋಗಿಸಬೇಕಾದ ಸರಳ ಸಾವಯವ ತಂತ್ರಜ್ಞಾನವೆಂದರೆ ಮುಚ್ಚಿಗೆ ಅಥವಾ ಹೊದಿಕೆ ಹಾಕುವುದು. ಹೊದಿಕೆ ಹಾಕುವುದರಿಂದ ಸೂರ್ಯನ ಕಿರಣಗಳು ನೇರವಾಗಿ ಮಣ್ಣಿನ ಮೇಲೆ ಬೀಳುವುದಿಲ್ಲ. ಮಣ್ಣಿನಲ್ಲಿ ಸೂಕ್ಷ್ಮಾಣುಜೀವಿಗಳ ಕ್ರಿಯಾ ಚಟುವಟಿಕೆಗಳು ಉತ್ಕೃಷ್ಟವಾಗಿದ್ದು ಫಲವತ್ತಾದ ಮಣ್ಣನ್ನು ಉತ್ಪಾದಕಮಣ್ಣಾಗಿ ಪರಿವರ್ತಿಸಿ ಕಬ್ಬಿಗೆ ಅವಶ್ಯವಿರುವ ಪೋಷಕಾಂಶಗಳನ್ನು ಪ್ರಾಕೃತಿಕವಾಗಿ ಒದಗಿಸಿಕೊಡುತ್ತವೆ. ಹೊದಿಕೆ ಹಾಕುವುದರಿಂದ ಮಣ್ಣಿನ ಮೇಲ್ಪದರದಲ್ಲಿ ಕತ್ತಲು ಆವರಿಸಿಕೊಳ್ಳುವುದರಿಂದ ಎರೆಹುಳುಗಳು ಹೆಚ್ಚು ಕ್ರಿಯಾಶೀಲ ವಾಗಿರುತ್ತವೆ. ದಿನ ಕಳೆದಂತೆಲ್ಲಾ ಹೊದಿಕೆ ಹಾಕಿರುವ ರವದಿ ಮಣ್ಣಿನೊಂದಿಗೆ ಬೆರೆತು ಮಣ್ಣಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳನ್ನು ಹೆಚ್ಚಿಸುತ್ತದೆ. ಮಣ್ಣಿನಲ್ಲಿ ಅವಶ್ಯವಾಗಿ ಇರಬೇಕಾದ ಶೇ.2.5ರ ಸಾವಯವ ಇಂಗಾಲವನ್ನು



ಕಾಪಾಡಿಕೊಳ್ಳುತ್ತದೆ. ಇಷ್ಟೇ ಅಲ್ಲದೆ, ರವದಿಯ ಹೊದಿಕೆಯಿಂದ ಸೂರ್ಯನ ಶಾಖ ನೇರವಾಗಿ ಮಣ್ಣಿನ ಮೇಲೆ ಬೀಳದಿರುವುದರಿಂದ ಮಣ್ಣು ತೇವಾಂಶ ಕಾಪಾಡಿಕೊಳ್ಳುತ್ತದೆ ಹಾಗೂ ಭೂಮಿಯ ಅಂತರಾಳದಿಂದ ಕೇಶಾಕರ್ಷಣೆ ಮೂಲಕ ಬರುವ ತೇವಾಂಶ ಸಹ ರವದಿಯ ಅಪ್ಪುಗೆಯಿಂದ ಮಣ್ಣಿನಲ್ಲಿ ತೇವಾಂಶ ಹೆಚ್ಚಿಸಿ ಕಡಿಮೆ ನೀರು ನಿರ್ವಹಣೆಯಲ್ಲಿ ಉತ್ತಮ ಇಳುವರಿ ಬರಲು ಸಹಕರಿಸುತ್ತದೆ. ನಿರಂತರವಾಗಿ ರವದಿಯ ಹೊದಿಕೆಯನ್ನು, ಪದರ ಪದರವಾಗಿ ಹಾಕುತ್ತಿದ್ದರೆ ಮಣ್ಣಿನಲ್ಲಿ ಹ್ಯೂಮಸ್ ಸೃಷ್ಟಿಯಾಗುತ್ತದೆ. ಕಬ್ಬಿನ ಕೃಷಿಯಲ್ಲಿ ಸುಸ್ಥಿರತೆ ಕಾಣಬಹುದು. ರವದಿಯ ಹೊದಿಕೆ ಈ ತಂತ್ರಜ್ಞಾನದಿಂದ ಕಳೆಗಳು ಆಶ್ಚರ್ಯ ರೀತಿಯಲ್ಲಿ ನಿವಾರಣೆಯಾಗುತ್ತವೆ. ಯಾವುದೇ ಕಳೆನಾಶಕಗಳ ಬಳಕೆ ಅವಶ್ಯಕತೆ ಇಲ್ಲ.

ಇಂತಹ ಅದ್ಭುತ ಫಲಿತಾಂಶಕ್ಕೆ ಮುಖ್ಯವಾಗಿ ಮಣ್ಣಿನಲ್ಲಿ ರವದಿ ಬೇಗ ಕರಗಬೇಕು. Dr. Soil ಸಾವಯವ ಕೃಷಿ ಪ್ರಾರಂಭದಲ್ಲಿ ನೀವು ಸ್ವಲ್ಪ ಹೆಚ್ಚಿಗೆ Dr. Soil ನೀಡುವುದರಿಂದ ಮಣ್ಣಿನಲ್ಲಿ ಬೇಗ ಜೈವಿಕ ಪರಿಸರ ಸೃಷ್ಟಿಯಾಗಿ ರವದಿ ಕರಗುತ್ತದೆ. ಈ ನಿಟ್ಟಿನಲ್ಲಿ ರೈತರು ತಮ್ಮ ತಾಳ್ಮೆ ಜಾಣ್ಮೆಯಿಂದ Dr. Soil ಬಳಸಿ ರವದಿ ಮುಚ್ಚಿಗೆಯಿಂದ ಇಳುವರಿ ಹೆಚ್ಚಿಗೆ ಮಾಡಿಕೊಳ್ಳಬಹುದು.

**ರವದಿಯನ್ನು ದಪ್ಪದಾಗಿ ಹಾಕಬಾರದು. ಮಣ್ಣಿನ ಮೇಲ್ಪದರದಲ್ಲಿ ಗಾಳಿ ಸರಾಗವಾಗಿ ಹರಿದಾಡುವ ಹಾಗೆ ರವದಿಯ ಮುಚ್ಚಿಗೆ ಇರಲಿ.**

ಕಲಿಯಿರಿ ಕಲಿಸಿರಿ

## ಅತಿಯಾದ ಲಘು ಪೋಷಕಾಂಶಗಳ ಬಳಕೆ ದಿನೇ ದಿನೇ ಕಬ್ಬಿನ ಇಳುವರಿಯಲ್ಲಿ ಇಳಿಕೆ

1950ರ ಹಿಂದೆ ಎಲ್ಲರೂ ಸಾವಯವ ಕೃಷಿಕರೇ ಆಗ ಯಾವ ರಾಸಾಯನಿಕ ಗೊಬ್ಬರಗಳು, ಲಘು ಪೋಷಕಾಂಶಗಳು, ಪತ್ರ ಸಿಂಚನಗಳು ಇರಲಿಲ್ಲ. ದಿನೇ ದಿನೇ ಕೃಷಿಯಲ್ಲಿ ವಿಜ್ಞಾನದ ಹೊಸ ಹೊಸ ಅವಿಷ್ಕಾರಗಳು ಬಂದವು. ರಾಸಾಯನಿಕ ಗೊಬ್ಬರಗಳ ಬಳಕೆಗೆ ಬಂದ ಪ್ರಾರಂಭದ ದಿನಗಳಲ್ಲಿ ಒಳ್ಳೆಯ ಇಳುವರಿ ಬಂತು. ನಂತರ ವರ್ಷದಿಂದ ವರ್ಷಕ್ಕೆ ಇಳುವರಿ ಕುಂಠಿತವಾಗುತಾ ಹೋಯಿತು. ಆಗ ವಿಜ್ಞಾನಿಗಳು ಸಂಶೋಧನೆ ಕೈಗೊಂಡು ಇಳುವರಿ ಕುಂಠಿತಗೊಳ್ಳಲು ಲಘು ಪೋಷಕಾಂಶಗಳ ಕೊರತೆಯೇ ಕಾರಣ ಎಂದು ತಿಳಿಸಿದರು. ಮಣ್ಣಿನಲ್ಲಿ ಆದ ಈ ಕೊರತೆಗೆ ಮುಖ್ಯ ಕಾರಣ ರಾಸಾಯನಿಕ ಗೊಬ್ಬರಗಳ ಅವೈಜ್ಞಾನಿಕ ಬಳಕೆ ಎಂಬುದು ಕಟುಸತ್ಯ. ರೈತರು ಸಾರಜನಕಯುಕ್ತ ಗೊಬ್ಬರಗಳನ್ನು ಹೆಚ್ಚಿಗೆ ಬಳಸಿದಾಗ ಮಣ್ಣಿನಲ್ಲಿ ತಾಮ್ರದ ಕೊರತೆ ಉಂಟಾಗುತ್ತದೆ. ಹೆಚ್ಚಿನ ರಂಜಕ ಒದಗಿಸಿದಾಗ ಕಬ್ಬಿಣ, ತಾಮ್ರ, ಸತು, ಹೀರಿಕೊಳ್ಳಲು ಸಸ್ಯಗಳಿಗೆ ತೊಂದರೆಯಾಗುತ್ತದೆ. ಹೆಚ್ಚಿನ ಪೊಟ್ಯಾಷ್ ಒದಗಿಸಿದಾಗ ಮಗ್ನೀಶಿಯಂ ಕೊರತೆ ಉಂಟಾಗುತ್ತದೆ. ಹೀಗೆ ಮಣ್ಣಿನಲ್ಲಿ ರಸಸಾರ PH ಏರುಪೇರಾದಾಗ ಹುಳಿ ಮಣ್ಣಿನಲ್ಲಿ ಸಾರಜನಕ, ರಂಜಕ, ಪೊಟ್ಯಾಶ್, ಕ್ಯಾಲ್ಸಿಯಂ, ಮೆಗ್ನೀಶಿಯಂ ಪೋಷಕಾಂಶಗಳ ಕೊರತೆ ಕಂಡು ಬರುತ್ತದೆ. ಅದೇ ರೀತಿ ಪ್ರತ್ಯಾಮ್ಲೀಯ ಮಣ್ಣಿನಲ್ಲಿ ಕಬ್ಬಿಣ, ಮ್ಯಾಂಗನೀಸ್, ತಾಮ್ರ, ಸತು, ಬೋರಾನ್‌ಗಳ ಕೊರತೆ ಕಾಣಿಸುತ್ತದೆ. ಹೀಗಾಗಿ ರೈತರು ರಾಸಾಯನಿಕಗಳ ಅನಿಯಮಿತ ಹಾಗೂ ಅವೈಜ್ಞಾನಿಕ ಬಳಕೆಯಿಂದ ಮಣ್ಣಿನ ರಸಾಯನಿಕ ಗುಣಧರ್ಮಗಳಲ್ಲಿ ಏರುಪೇರು ಉಂಟು ಮಾಡಿ ಮಣ್ಣು ಉತ್ಪಾದಕತೆ ಕಳೆದುಕೊಳ್ಳುತ್ತದೆ ಹಾಗೂ ಸಸ್ಯಗಳಿಗೆ ರೋಗ ರುಜಿನಗಳು ದಿನೇ ದಿನೇ ಹೆಚ್ಚುತ್ತಿರುವುದು ತುಂಬಾ ಆತಂಕಕಾರಿಯಾಗಿ ಕೃಷಿ ಜಟಿಲವಾಗುತ್ತದೆ. ಸಾವಯವ ವಿಜ್ಞಾನ ಸ್ಪಷ್ಟವಾಗಿ ಹೇಳುವಂತೆ ಯಾವುದೇ ಲಘು ಪೋಷಕಾಂಶಗಳು ಮಣ್ಣಿನಲ್ಲಿ ನಡೆಯುವ ಸೂಕ್ಷ್ಮಜೀವಿಗಳ ಜೈವಿಕ ಚಟುವಟಿಕೆಯಿಂದ ಉತ್ಪತ್ತಿಯಾಗಬೇಕು, ಹೊರತು ಖನಿಜಗಳ ರೂಪಾಂತರದಿಂದಲ್ಲ ಎಂಬುದನ್ನು ರೈತರು ಅರ್ಥಮಾಡಿಕೊಳ್ಳಬೇಕು. ಒಂದು ವೇಳೆ ತೀರ ಕಳಪೆ ಮಣ್ಣುಗಳಿಗೆ ಲಘು ಪೋಷಕಾಂಶಗಳನ್ನು ಒದಗಿಸಬೇಕಾದರೆ ಪ್ರಾಕೃತಿಕವಾಗಿ ಸಿಗುವ 1 ಕೆ.ಜಿ. ಶಿಲಾರಂಜಕದಲ್ಲಿ 51 ಗ್ರಾಂ ಸಿಲಿಕನ್ ಆಮ್ಲ, 5 ಗ್ರಾಂ ಕಬ್ಬಿಣ, 400 ಮಿ. ಗ್ರಾಂ ಸತು, 70 ಮಿ. ಗ್ರಾಂ. ಕೋಬಾಲ್ಟ್ ಇರುತ್ತದೆ ಎಂದು ಕಂಡುಬಂದಿದೆ. ಶಿಲಾರಂಜಕದಲ್ಲಿನ ಸತುವಿನ ಅಂಶ ಬಹಳ ಮುಖ್ಯವಾದುದು ಶಿಲಾರಂಜಕವನ್ನು ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಗುಂಡಿಗಳ ಮೂಲಕ ಸೇರಿಸಿ ಬೆಳೆ ಬೆಳೆಸುವುದರಿಂದ ಲಘು ಪೋಷಕಾಂಶಗಳನ್ನು ಸಸ್ಯಗಳಿಗೆ ವಿಪುಲವಾಗಿ ಒದಗಿಸಬಹುದು. ಒಂದು ವೇಳೆ ಶಿಲಾರಂಜಕ ಲಭ್ಯವಿಲ್ಲದಿದ್ದರೆ ಕಲ್ಲನ್ನು ಜಲ್ಲಿಯಾಗಿಸುವ ಯಂತ್ರಾಗಾರಗಳಲ್ಲಿ ದೊರೆಯುವ ಕಲ್ಲಿನ ಧೂಳನ್ನು ಬಳಸಬಹುದು. ಈ ಕಲ್ಲಿನ ಧೂಳಿನಿಂದ ಅರಿಶಿಣ, ಶುಂಠಿ ಮುಂತಾದ ಬೆಳೆಗಳಲ್ಲಿ ಗಡ್ಡೆ ಕೊಳೆಯುವುದೂ ಕಡಿಮೆಯಾದ ನಿದರ್ಶನಗಳಿವೆ. ಆದ್ದರಿಂದ ಕಾಂಪೋಸ್ಟ್ ಗುಂಡಿಗಳಲ್ಲಿ ತಪ್ಪದೇ ಒಂದು ಘ.ಮೀ. ವ್ಯಾಪ್ತಿಗೆ ಒಂದು ಕೆ.ಜಿ. ಕಲ್ಲಿನ ಧೂಳು ಮತ್ತು ಅರ್ಧ ಕೆ.ಜಿ. ಸುಣ್ಣ ಸೇರಿಸಿ ಕಾಂಪೋಸ್ಟ್ ಗುಂಡಿಯಲ್ಲಿ ಉತ್ತಮವಾಗಿ ಗಾಳಿಯಾಡಲು ಅವಕಾಶ ಮಾಡಿಕೊಟ್ಟರೆ ಉತ್ಕೃಷ್ಟ ಲಘು ಪೋಷಕಾಂಶಗಳು ದೊರೆತು ಮಣ್ಣಿನ ಫಲವತ್ತತೆ ಹೆಚ್ಚಿ ಉತ್ತಮ ಇಳುವರಿ ಪಡೆಯಬಹುದು.

# ಆಧುನಿಕ ಸಾವಯವ ಕೃಷಿ ದಾರ್ಶನಿಕ ಶ್ರೀ ಕೆ.ಆರ್. ಹುಲ್ಲುನಾಚೇಗೌಡ

**ಶ್ರೀ ಕೆ.ಆರ್. ಹುಲ್ಲುನಾಚೇಗೌಡರ ಸಾವಯವ ಕೃಷಿ ಪ್ರಯೋಗಗಳು ವೈಜ್ಞಾನಿಕವಾಗಿದೆ ಮತ್ತು ಕ್ರಾಂತಿಕಾರಿಯಾಗಿವೆ. ನನಗೆ ಬಹಳ ಅಚ್ಚರಿ ಮೂಡಿಸಿವೆ. ನಮ್ಮ ದೇಶದ ಸಾವಯವ ಕೃಷಿಗೆ ಹೊಸ ಚೈತನ್ಯ ತಂದ ಕ್ರಾಂತಿ ಪುರುಷ.**



## ಸಂದರ್ಶನ

**15 ವರ್ಷದ ನನ್ನ ಸಾವಯವ ಕೃಷಿ ಬದುಕಿನಲ್ಲಿ Dr. Soil ನಂತಹ ದ್ರವರೂಪದ ಸಾವಯವ ಗೊಬ್ಬರ ನಾನು ನೋಡಲಿಲ್ಲ.**

ಕರ್ನಾಟಕದ ಸಾವಯವ ಕೃಷಿ ಕ್ಷೇತ್ರದಲ್ಲಿ ಕೆ.ಟಿ.ಸುರೇಶ್‌ರವರ ಹೆಸರು ಚಿರಪರಿಚಿತ. ಸಾವಯವ ಕೃಷಿ ಪ್ರಮಾಣಪತ್ರ ನೀಡುವ ಬೆರಳೆಣಿಕೆಯ ಸಂಪನ್ಮೂಲ ವ್ಯಕ್ತಿಗಳಲ್ಲಿ ಇವರು ಒಬ್ಬರು. ಮೂಲತಹ ಸಕಲೇಶಪುರದವರಾದ ಇವರು ಈಗ ವಾಸಿಸುತ್ತಿರುವುದು ತಮ್ಮ ಕನಸಿನ ಪ್ರಕೃತಿ ಸ್ನೇಹಿ, No Fan, No Fridge, No Plasting, No Paintingನ ಗುಬ್ಬಿಗೂಡಿನಲ್ಲಿ ಪ್ರತಿದಿನ ಸಾವಯವ ಆಹಾರದೊಂದಿಗೆ ಜೀವನ. ಇವರ ಮನೆ ಇವರ ಪ್ರಕೃತಿ ಪ್ರೀತಿ, ಸರಳತೆ, ಶ್ರೇಷ್ಠ ಚಿಂತನೆ, ದಾರ್ಶನಿಕತೆ ಹಾಗೂ ಆದರ್ಶಗಳಿಗೆ ಹಿಡಿದ ಕೈಗನ್ನಡಿಯಂತಿದೆ. ಶ್ರೀಯುತ ಕೆ.ಟಿ.ಸುರೇಶ್‌ರವರು ಎಂಎಸ್‌ಸಿ., ಕೃಷಿ ಪದವೀದರರು U.A.S. G.K.V.K. ಬೆಂಗಳೂರು ಇಲ್ಲಿ ಶಿಕ್ಷಣ ಮುಗಿಸಿ ADATS ಎಂಬ NGO ಸಂಸ್ಥೆಯಲ್ಲಿ DLDP (Dry Land Development Program) ಎಂಬ ಯೋಜನೆಯ ಅನುಷ್ಟಾನ ಅಧಿಕಾರಿಯಾಗಿ ಕೃಷಿ ಸೇವೆಗೆ ತೊಡಗಿಸಿಕೊಂಡ ಇವರು ಪ್ರತಿದಿನ ಕೃಷಿ ಚಿಂತನೆಗಳೊಂದಿಗೆ ಸಾಗುತ್ತಾ M.O.A ಎಂಬ ಜಪಾನ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ. ತದ ನಂತರ I.M.O ಎಂಬ ಸ್ವಿಡ್ಜರ್ ಲ್ಯಾಂಡ್ ಸಂಸ್ಥೆಯಲ್ಲಿ ಕೆಲಸ ಮಾಡಿದ ಅಪಾರ ಅನುಭವ ಇವರಿಗಿದೆ. ಶ್ರೀಯುತರು 2002ರಿಂದ AOCA ಸಂಸ್ಥೆಯಲ್ಲಿ ಹಾಗೂ APOF ಸಂಸ್ಥೆಯಲ್ಲಿಯೂ ಕೆಲಸ ಮಾಡಿ ಸಾವಯವ ಕೃಷಿ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಈ ಸಂದರ್ಶನದಲ್ಲಿ ಅವರ ಅನುಭವಗಳನ್ನು ಅವರ ನೇರಮಾತುಗಳಲ್ಲಿ ನಮ್ಮೊಂದಿಗೆ ಹಂಚಿಕೊಂಡಿರುತ್ತಾರೆ.

**ಸಾರ್ ತಾವು ಓದಿದ ರಾಸಾಯನಿಕ ಕೃಷಿ ನಿಮ್ಮ ಸೇವೆಯ ಆಯ್ಕೆ ಸಾವಯವ ಕೃಷಿ ಈ ಸಾವಯವ ಕೃಷಿಗೆ ಬರಲು ನಿಮಗೆ ಪ್ರೇರಣೆ ಯಾರು?**

**ಉತ್ತರ:** ನಾನು ADATS ಸಂಸ್ಥೆಯಲ್ಲಿ DLDP ಯೋಜನೆಯಲ್ಲಿ ಅನುಷ್ಠಾನ ಅಧಿಕಾರಿಯಾಗಿದ್ದಾಗ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಬಾಗೇಪಲ್ಲಿ, ಶಿಡ್ಲಘಟ್ಟ, ಚಿಂತಾಮಣಿ ತಾಲ್ಲೂಕುಗಳಲ್ಲಿ ರೈತರೊಂದಿಗೆ ಕೆಲಸ ಮಾಡುವಾಗ ರೈತರ ಸಾಂಪ್ರದಾಯಿಕ ಕೃಷಿ ವಿವರಣೆಗಳೂ ಹಾಗೂ ಕೆಲ ಬಡ ರೈತರು ಯಾವುದೇ ರಾಸಾಯನಿಕ ಗೊಬ್ಬರಗಳು ಬಳಸದೆ ಶೇಂಗಾ ಹಾಗೂ ರಾಗಿ ಬೆಳೆಯುತ್ತಿದ್ದರು. ಅವರ ಸರಳ ಕೃಷಿ ತಂತ್ರಜ್ಞಾನಗಳಿಂದ ಪ್ರೇರಿತನಾಗಿ ನಾನು ಸಾವಯವ ಕೃಷಿ ಕ್ಷೇತ್ರಕ್ಕೆ ಪ್ರೇರಣೆಗೊಂಡೆ.

**ಸಾವಯವ ಕೃಷಿಗೆ ರೈತರು ಹೆಚ್ಚು ಒಲವು ತೋರಿಸುವುದಿಲ್ಲ ಎಂಬ ಮಾತಿದೆ ಇದಕ್ಕೆ ಕಾರಣವೇನು?**

**ಉತ್ತರ:** ಬಹಳ ಮುಖ್ಯ ಕಾರಣ ಸಾವಯವ ಕೃಷಿಯಲ್ಲಿ ಉತ್ತಮ ಫಲಿತಾಂಶಕ್ಕೆ 2–3 ವರ್ಷ ಕಾಯಬೇಕು. ಅದಕ್ಕಾಗಿ ರೈತರು ಒಲವು ತೋರಿಸುವುದಿಲ್ಲ.

**ಈಗ ಸಾವಯವ ಕೃಷಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳು ಅಭಿವೃದ್ಧಿಯಾಗಿವೆಯೇ?**

**ಉತ್ತರ:** ಹೌದು, ನೋಡಿ ಈಗ ಸಸ್ಯ ಸಂಜೀವಿನಿ ಸಂಸ್ಥೆಯವರು ಪರಿಚಯಿಸಿರುವ Dr. Soil ಒಂದು ಅದ್ಭುತ ದ್ರವರೂಪದ ಸಾವಯವ ಗೊಬ್ಬರ ನಾನು ಕ್ಷೇತ್ರ ಮಟ್ಟದಲ್ಲಿ ಹಾಗೂ ರೈತರ ಬಾಯಿಂದ ಅವರ ಉತ್ತಮ ಫಲಿತಾಂಶಗಳನ್ನು ಕೇಳಿದ್ದೇನೆ, ನೋಡಿದ್ದೇನೆ. ಮೊದಲನೇ ಬೆಳೆಯಿಂದಲೇ ಉತ್ತಮ ಇಳುವರಿ ಬರುತ್ತಿದೆ.

**Dr. Soil ಒಂದು ಪ್ರಮಾಣೀಕರಿಸಿದ ದ್ರವರೂಪದ ಗೊಬ್ಬರವೇ?**

**ಉತ್ತರ:** ಹೌದು, NPOP ನಿಯಮಗಳ ಅಡಿಯಲ್ಲಿ AOCA ಸಂಸ್ಥೆಯಿಂದ Dr. Soil ಅನ್ನು ಪ್ರಮಾಣೀಕರಿಸಲಾಗಿದೆ.

**ಸತತವಾಗಿ Dr. Soil ಕೃಷಿ ಮಾಡಿಕೊಂಡು ಹೋದರೆ ಸಾವಯವ ಕೃಷಿ ಪ್ರಮಾಣಪತ್ರ ಪಡೆಯಬಹುದೇ?**

**ಉತ್ತರ:** ಧಾರಾಳವಾಗಿ ಪಡೆಯಬಹುದು. Dr. Soil ಸಂಪೂರ್ಣ ಸಾವಯವ ಗೊಬ್ಬರವಾಗಿದೆ. ಪ್ರಮಾಣಪತ್ರ ನೀಡಲು ಯಾವುದೇ ಅಡ್ಡಿ ಆತಂಕವಿಲ್ಲ.

**Dr. Soil ನಲ್ಲಿ ಬೆಳೆದ ಆಹಾರ ಉತ್ಪನ್ನಗಳು ಅಂತಾರಾಷ್ಟ್ರೀಯ ಗುಣಮಟ್ಟವನ್ನು ಪಡೆಯುತ್ತದೆಯೇ?**

**ಉತ್ತರ:** ಹೌದು, ಸತತವಾಗಿ Dr. Soil ಬಳಸಿ ಪರಿವರ್ತನಾ ಅವಧಿ ಬಳಿಕ ಬೆಳೆದ ಎಲ್ಲಾ ಉತ್ಪನ್ನಗಳು ಅಂತಾರಾಷ್ಟ್ರೀಯ ಗುಣಮಟ್ಟ ಪಡೆಯುತ್ತವೆ. ರಫ್ತುಯೋಗ್ಯ ಉತ್ಪನ್ನಗಳಾಗಿರುತ್ತವೆ.

**Dr. Soil ಬಳಸಿದ ನಂತರ ಮಣ್ಣಿನಲ್ಲಿ ಆಗುವ ಬದಲಾವಣೆಗಳನ್ನು ನೀವು ಕ್ಷೇತ್ರಮಟ್ಟದಲ್ಲಿ ಗಮನಿಸಿದ್ದೀರಾ?**

**ಉತ್ತರ:** ಹೌದು, ಮಣ್ಣು ಬಹಳ ಮೃದುವಾಗುತ್ತದೆ. ಕೇವಲ 10 – 15 ದಿನಗಳಲ್ಲಿ ಈ ಬದಲಾವಣೆ ನೋಡಬಹುದು. ಅಷ್ಟೇ ಅಲ್ಲದೆ, ಒಮ್ಮೆ ನನ್ನ ಸ್ನೇಹಿತ ಡಾ॥ ಶ್ರೀಕಾಂತ್ ಮಣ್ಣು ವಿಜ್ಞಾನ ಸಂಶೋಧಕರೊಡನೆ Dr. Soil ಬಳಸಿದ ಒಂದು ತೋಟಕ್ಕೆ ಹೋದಾಗ ಎರೆಹುಳುಗಳು ಸಮೃದ್ಧಿಯಾಗಿ ಬಂದಿರುವುದನ್ನು ಕಣ್ಣಾರೆ ಕಂಡೆವು. Dr. Soil ನ ಶಕ್ತಿ ಕಂಡು ಆಶ್ಚರ್ಯಪಟ್ಟರು.

**Dr. Soil ಸಾವಯವ ಕೃಷಿಕರಿಗೆ ಅನುಕೂಲವಾಗಲಿದೆ?**

**ಉತ್ತರ:** ಇಡೀ ಭಾರತದ ಕೃಷಿಗೆ Dr. Soil ಬೇಕಾಗಿದೆ. ಬರುಡಾಗಿರುವ ಭೂಮಿಗೆ ಮರು ಜೀವ ತುಂಬಲು Dr. Soil ಬಹಳ ಅನುಕೂಲವಾಗಿದೆ.

**ತಾವು ಕಂಡಂತೆ ಕೃಷಿಯಲ್ಲಿ Dr. Soil ಮಾಡುತ್ತಿರುವ ಬದಲಾವಣೆಗಳೇನು?**

**ಉತ್ತರ:** ಖರ್ಚು ಕಡಿಮೆ ಇಳುವರಿ ಹೆಚ್ಚು, ರೋಗಗಳ ಬಾಧೆ ಕಡಿಮೆ ಕಸದ ಸಮಸ್ಯೆ ಕಡಿಮೆ, ನೀರಿನ ಸಮಸ್ಯೆ ಕಡಿಮೆಯಾಗುತ್ತದೆ. ಕೂಲಿಕಾರರ ಕೆಲಸ ಕಡಿಮೆಯಾಗಿದೆ. ಅನಾವಶ್ಯಕ ಸಿಂಪರಣೆ ಇಲ್ಲ. ವಿಷಮುಕ್ತ ಭೂಮಿ ವಿಷಮುಕ್ತ ನೀರು ವಿಷಮುಕ್ತ ಆಹಾರ ಹಾಗೂ ವಿಷಮುಕ್ತ ಕೃಷಿ ಜೀವನ ಸಾಧ್ಯವಾಗಿರುವುದು ಒಂದು ಸೌಭಾಗ್ಯವೇ ಸರಿ.

**Dr. Soil ಸಾವಯವ ಕೃಷಿಗೆ ಪೂರಕವಾಗಿದೆಯೇ?**

**ಉತ್ತರ:** Dr. Soil ರಾಸಾಯನಿಕ ಕೃಷಿಯಿಂದ ರೈತರನ್ನು ಸಾವಯವ ಕೃಷಿಗೆ ಪರಿವರ್ತಿಸಲು ಇರುವ ಸರಳ ಹಾಗೂ ಸುಲಭ ವಿಧಾನ Dr. Soil ಸಾವಯವ ಕೃಷಿ ಕ್ಷೇತ್ರ ವಿಸ್ತರಣೆಗೆ ಒಂದು ವೇಗವರ್ಧಕವಾಗಿ ಕ್ರಾಂತಿಕಾರಿ ದ್ರವರೂಪದ ಸಾವಯವ ಗೊಬ್ಬರವಾಗಿ ಕೆಲಸ ಮಾಡುತ್ತದೆ.



## ಇದು ನಿಮಗೆ ತಿಳಿದಿರಲಿ

### ಕೂಳೆ ಕಬ್ಬು ಮತ್ತು ಎರೆಹುಳು ಅವಿನಾಭವ ಸಂಬಂಧ

ಕಬ್ಬಿನಗದ್ದೆಯಲ್ಲಿಸಾಕಷ್ಟುನೆರಳುಮತ್ತುಕತ್ತಲುಆವರಿಸುವುದರಿಂದಎರೆಹುಳುಕ್ರಿಯಾಶೀಲವಾಗಿರುತ್ತದೆ ಹಾಗೂ ಕಬ್ಬಿನ ಗದ್ದೆಯಲ್ಲಿ ಮಾನವ ಚಟುವಟಿಕೆಗಳು ಕಡಿಮೆ ಇರುವುದರಿಂದ ಎರೆಹುಳುಗಳಿಗೆ ಯಾವುದೇ ಆತಂಕವಿಲ್ಲದೆ ಅಭಿವೃದ್ಧಿ ಹೊಂದುತ್ತವೆ ಹಾಗೂ ಎರೆಹುಳುವಿಗೆ ರವದಿ ಪ್ರಿಯವಾದ ತ್ಯಾಜ್ಯವಾಗಿದೆ. Dr. Soil ಸಾವಯವ ಕೃಷಿಯಲ್ಲಿ ರವದಿ ಬೇಗ ಕಳಿಯುತ್ತದೆ ಹಾಗೂ Dr. Soil ನಲ್ಲಿ ಸಾವಯವ ಇಂಗಾಲವಿರುವುದರಿಂದ ಎರೆಹುಳುಗಳು ಹೆಚ್ಚು ಕ್ರಿಯಾಶೀಲವಾಗಿರುತ್ತವೆ.






## ಕೂಳೆ ಕಬ್ಬು ಲವಣಿ ಕಬ್ಬಿಗಿಂತ Super ಇದೆ.

**Dr. Soil ದ್ರವರೂಪದ ಗೊಬ್ಬರವನ್ನು ಕೂಳೆಕಬ್ಬಿಗೆ ಬಿಟ್ಟಿದ್ದೇನೆ. ಲವಣಿ ಮಾಡಿದ ಮೊದಲನೇ ಬೆಳೆ ಹೇಗೆ ಬರುತ್ತದೆಯೋ ಅದಕ್ಕಿಂತ ಚೆನ್ನಾಗಿ ನನ್ನ ತೋಟವಿದೆ. ಕಬ್ಬಿಗೆ ಬೇಕಾದ ಎಲ್ಲಾ ಪೋಷಕಾಂಶಗಳು Dr. Soil ನಿಂದ ಸಿಕ್ಕಿದೆ ಎಂಬುದು ನನ್ನ ಅನಿಸಿಕೆಯಾಗಿದೆ. ಈ ಕ್ರಾಂತಿಕಾರಿ ಫಲಿತಾಂಶದಿಂದ ನಾನು ಆಶ್ಚರ್ಯಚಕಿತನಾಗಿದ್ದೇನೆ.**



**ವಿಠಲ್ ಪರಸಪ್ಪ ಕಮತಿ**
**ರಾಜಾಪುರ, ಗೋಕಾಖ ತಾ. ಬೆಳಗಾಂ ಜಿಲ್ಲೆ.**

ನೋಡ್ರಿ ನಮಗೆ ರಾಜು ಸತ್ಯಪ್ಪ ಬೈರುಗೋಳ್ ಆತ್ಮೀಯ ಸ್ನೇಹಿತರು ನನಗೆ ಶ್ರೀ ಕೆ.ಆರ್.ಹುಲ್ಲುನಾಚೇಗೌಡರ ಸಾವಯವ ಕೃಷಿ ಮಾಹಿತಿ ಕಾರ್ಯಕ್ರಮಕ್ಕೆ ನನ್ನನ್ನು ಕರೆದುಕೊಂಡು ಹೋದರು. ಆ ಕೃಷಿ ತರಗತಿಯಲ್ಲಿ ನಮಗೆ ಸಾರ್ ಹೇಳುವ ವಿಷಯ ತುಂಬಾ ಸತ್ಯ ಇದೆ ಅಂಥಾ ಅನ್ನಿಸಿತು. ತಡಮಾಡದೆ Dr. Soil ದ್ರವರೂಪದ ಗೊಬ್ಬರವನ್ನು ನ್ನನ ಕಬ್ಬಿನ ತೋಟ, ಕಲ್ಲಂಗಡಿ ಹಾಗೂ ಬಾಳೆ ಮಿಶ್ರಬೆಳೆಗೆ ನಾನು Dr. Soil ನೀಡಿದೆ. Dr. Soil ನೀಡಿದ ಮೇಲೆ ಬೆಳೆ ಬಹಳ ಛಲೋ ಆಯ್ತು. ಮಾತಿನಲ್ಲಿ ಹೇಳುವುದಕ್ಕೆ ಆಗೋಲ್ಲ. ಬೆಳೆ ಸುಖ ನೀವು ನೋಡಿದರೇ ತಿಳಿಯುತ್ತೆ. ಎಂಥಾ ಚಂದಾ ತಾಜಾ ಹಸಿರು. ಇಡೀ ಸುತ್ತಮುತ್ತ ಕಬ್ಬಿನ ಗದ್ದೆಯಲ್ಲಿ ನಮ್ಮ ಗದ್ದೆ ಎತ್ತಿ ಕಾಣುತ್ತೆ. ಬೆಳವಣಿಗೆ ಬಹಳ ವೇಗೆ ಇದೆ, ಬೆಳೆ ಬಹಳ ಸಮೃದ್ಧಿ ಇದೆ, ಮರಿಗಳು ಸಂಖ್ಯೆ ಹೆಚ್ಚಿದೆ. ಮಣ್ಣಿನಲ್ಲಿ ಬಹಳ ಬದಲವಣೆಯಾಗಿದೆ. ಕಸ ಕಡಿಮೆಯಾಗಿದೆ. ಎರೆಹುಳು ಬಂದಿದೆ. ಒಂದು ತಿಂಗಳಲ್ಲಿ ಆದ ಅದ್ಭುತ ಬದಲಾವಣೆಗೆ ನನ್ನ ಕಣ್ಣನ್ನೇ ನಾನು ನಂಬಲಿಕ್ಕೆ ಆಗ್ತಾ ಇಲ್ಲ. ನಾನು ಏನು ವಿಶೇಷ ಮಾಡಲಿಲ್ಲ. ಎಕರೆಗೆ 50 ಲೀ. Dr. Soil ಬಿಟ್ಟಿದ್ದು ಮಾತ್ರ ನನ್ನ ಕೆಲಸ. ಇನ್ನೂ ಕಲ್ಲಂಗಡಿ ಬಹಳ ಚೆನ್ನಾಗಿ ಬಂದಿದೆ. ಬಳ್ಳಿ ಬಹಳ ಚೆನ್ನಾಗಿದೆ. ಕಾಯಿಗಳ ಗಾತ್ರ ಚೆನ್ನಾಗಿದೆ. ಯಾವುದೇ ಸಿಂಪರಣೆಗಳು ಮಾಡಿಲ್ಲ. ಬಾಳೆಯಲ್ಲಿ ಕಲ್ಲಂಗಡಿ ಅಂತರ ಬೆಳೆ ಮಾಡಿದ್ದೇನೆ. ಬಾಳೆ ಸಸ್ಯಗಳು ಬಹಳ ಚೆನ್ನಾಗಿ ಬೆಳೆದಿವೆ.

**ಕಲಿಯಿರಿ ಕಲಿಸಿರಿ**

### ಕ್ಷೇತ್ರದ ಜೀವಿಗಳು ಮತ್ತು ಕೂಳೆ ಕಬ್ಬು

ಸಾವಯವ ಕೃಷಿಯಲ್ಲಿ ಬಹಳ ಪ್ರಮುಖವಾಗಿ ಪಾತ್ರವಹಿಸುವುದು. ಆ ಮಣ್ಣಿನ ಕ್ಷೇತ್ರದ ಜೀವಿಗಳು ಈ ನಿಟ್ಟಿನಲ್ಲಿ ನಿಮ್ಮ ಮಣ್ಣಿನಲ್ಲಿಯೇ ಸೂಕ್ಷ್ಮಾಣು ಜೀವಿಗಳು ಎರೆಹುಳುಗಳು ಅಭಿವೃದ್ಧಿಗೊಂಡು ಕೃಷಿಗೆ ಪೂರಕವಾಗಿ



ಸಹಾಯ ಮಾಡುವಂತೆ ನೋಡಿಕೊಳ್ಳಬೇಕು ಹಾಗೂ ಪಾರಂಪರಿಕವಾಗಿ ರೈತನ ಜೊತೆಯಾಗಿದ್ದ ಸಾಕು ಪ್ರಾಣಿಗಳ ತ್ಯಾಜ್ಯಗಳು ಸಾವಯವ ಕೃಷಿಗೆ ಉತ್ಕೃಷ್ಟ ಪೋಷಕಾಂಶಗಳನ್ನು ಒದಗಿಸುತ್ತವೆ. ದನಕರುಗಳು ಕೇವಲ 24 ಗಂಟೆಗಳಲ್ಲಿಯೇ ಜೈವಿಕ ತ್ಯಾಜ್ಯಗಳನ್ನು ತಿಂದು ಸಗಣಿ (ಒಂದು ಹಂತದ ಕಾಂಪೋಸ್ಟ್) ಮಾಡಿಕೊಡುವುದು ಒಂದು ವಿಸ್ಮಯವಲ್ಲವೆ? ಸಾವಿರಾರು ವರ್ಷಗಳ ಇತಿಹಾಸವಿರುವ ಸಾವಯವ ಕೃಷಿಗೆ ನಮ್ಮ ಹಿರಿಯರು ಹಾಕಿರುವ ಇಂತಹ ಭದ್ರ ಬುನಾದಿಗೆ ನಾವೆಲ್ಲರೂ ಚಿರಋಣಿಗಳಾಗಿರಬೇಕು.



## ಹತ್ತಿಗೆ ಸಾವಯವ ಶಕ್ತಿ: ಸಾವಯವ ಕೃಷಿಯೆಡೆಗೆ ರೈತರ ಆಸಕ್ತಿ

**ದೇವೇಂದ್ರಪ್ಪ ತಳವಾರ,**
ಮಣ್ಣೂರು ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ.



ಡಾ ಸಾಯಿಲ್‌ನಲ್ಲಿ ಬೀಜೋಪಚಾರ ಮಾಡಿ ಹತ್ತಿಯನ್ನು ಬಿತ್ತನೆ ಮಾಡಿದೆ. ಹತ್ತಿಯ ಸಸಿಗಳು ಬಹಳ ಸಮೃದ್ಧಿಯಾಗಿ ಮೊಳಕೆ ಬಂದವು ಹಾಗೂ ಬೆಳವಣಿಗೆ ಬಹಳ ವೇಗವಾಗಿ ಬಂದಿದೆ. ಸಮೃದ್ಧಿಯಾಗಿ ಬೆಳೆ ಬೆಳೆಯಿತು. ಎಲೆಗಳು ತಾಜಾ ಹಸಿರಿನಿಂದ ಕೂಡಿದೆ. ಈ ತನಕ ಯಾವುದೇ ರೋಗಕ್ಕೆ ಹತ್ತಿ ಬಾದಿತವಾಗಿಲ್ಲ. ನಾನು ಯಾವುದೇ ಸಿಂಪರಣೆಗಳು ಮಾಡಿಲ್ಲ. ನಮ್ಮ ಅಕ್ಕಪಕ್ಕದ ಹೊಲದವರು ರಾಸಾಯಿನಿಕ ಕೃಷಿಯಲ್ಲಿ ಬೆಳೆದಿದ್ದಾರೆ. ಅವರು ಮತ್ತು ನಾವು ಒಂದೇ ದಿನ ಬಿತ್ತನೆ ಮಾಡಿದ್ದರೂ ಡಾ ಸಾಯಿಲ್ ಸಾವಯವ ಕೃಷಿಯ ನಮ್ಮ ಹೊಲ ರಾಸಾಯಿನಿಕ ಹೊಲಕ್ಕಿಂತ ಎರಡು ಪಟ್ಟು ಚೆನ್ನಾಗಿದೆ. ಸಮೃದ್ಧ ಪಸಲು ಬಂದಿದೆ. ಈ ಹಿಂದೆ ನಾನು ಬಹಳ ಆತಂಕದಿಂದ ಕೃಷಿ ಮಾಡುತ್ತಿದ್ದೆ. ಎಂಡೋಸಲ್ಫಾನ್ ವಿಷಗಳನ್ನು ಸಿಂಪರಣೆ ಮಾಡಬೇಕಾಗಿತ್ತು. ಈಗ ನನ್ನ ಕೃಷಿ ವಿಷಮುಕ್ತವಾಗಿದೆ.. ನನ್ನ ಭೂಮಿಗೆ ಜೀವ ಬಂದಿದೆ. ಎರೆ ಹುಳು ಭೂಮಿಯಲ್ಲಿ ಕಾಣುತ್ತಾ ಇದೆ. ನನಗೆ ಹೇಗೆ ಹೇಳಬೇಕೋ ತಿಳೀತಾ ಇಲ್ಲ. ಕೃಷಿಯಲ್ಲಿ ಸೋತುಹೋಗಿದ್ದೆ. ಕಡಿಮೆ ಖರ್ಚಿನಲ್ಲಿ ಇಂತಹ ಸಮೃದ್ಧ ಬೆಳೆ ಬಂದಿರುವುದಕ್ಕೆ ನನಗೆ ಬಹಳ ಸಂತೋಷವಾಗಿದೆ. ನನ್ನ ಹೊಲಕ್ಕೆ ಬಂದು ಬದುವಿನ ಮೇಲೆ ಕುಳಿತು ನನಗೆ ಸಾವಯವ ಕೃಷಿ ಜ್ಞಾನ ನೀಡಿದ ಸಾವಯವ ಕೃಷಿ ತಜ್ಞರಾದ ಶ್ರೀ ಕೆ.ಆರ್. ಹುಲ್ಲುನಾಚೇಗೌಡರಿಗೆ ನನ್ನ ಕೋಟಿ ಕೋಟಿ ನಮನಗಳು. ನಾನು ಹುಲ್ಲುನಾಚೇಗೌಡರ ಮಾರ್ಗದರ್ಶನದಲ್ಲಿ ಡಾ ಸಾಯಿಲ್ ಬಳಸಿ ಈರುಳ್ಳಿ ಸಹ ಬೆಳೆದಿದ್ದೆ. ಬಂಪರ್ ಬೆಳೆ ಬಂದಿತ್ತು.

## ಕಂಚಕರವಾಡಿಗೆ ಬಂದು ಕಬ್ಬಿನ ಸಿರಿ ನೋಡಿ

**ಕುಮಾರ ರಾಮ ತೋಳ**
**ಕಂಚಕರವಾಡಿ, ರಾಯಭಾಗ ತಾ. ಬೆಳಗಾಂ ಜಿಲ್ಲೆ.**

ನನ್ನ ತೋಟದ ಸುತ್ತಮುತ್ತ ಇರುವ ಪ್ರಗತಿಪರ ರೈತರ ನಡುವೆ ನಾನು ಒಬ್ಬ ಸಣ್ಣ ಕೃಷಿಕ. ನನಗೆ ಕೇವಲ ಮೂರುವರೆ ಎಕರೆ ಜಮೀನಿದೆ. ಅದರಲ್ಲಿ 3 ಎಕರೆ ಕಬ್ಬು ಅರ್ಧ ಎಕರೆ ಗೋವಿನಜೋಳ ಬೆಳೆ ಪ್ರತಿವರ್ಷ ಮಾಡುತ್ತೇವೆ. ನಮ್ಮ ಸ್ನೇಹಿತರಾದ ಯಲ್ಲಪ್ಪರವರು ನನಗೆ Dr. Soil ದ್ರವರೂಪದ ಸಾವಯವ ಗೊಬ್ಬರದ ಬಗ್ಗೆ ಮಾಹಿತಿ ನೀಡಿದರು. ಈ ಬಗ್ಗೆ ಪ್ರಾತ್ಯಕ್ಷಿಕೆ ತೋಟ ನೋಡಲು ರಾಯಭಾಗ ತಾ. ಸವಸುದ್ದಿ ಗ್ರಾಮದ ಮಹದೇವ ಶಿವಪ್ಪ ಜೋಡಟ್ಟಿರವರ ತೋಟ ನೋಡಲು ಹೋದೆ. ನಾನು ಹೋದಾಗ ಕಡುಬೇಸಿಗೆ ಅವರ ತೋಟಕ್ಕೆ ನೀರು ಕೊಟ್ಟು ಎರಡು ತಿಂಗಳು ಆಗಿತ್ತು. ಎರಡು ತಾಸು ನೀರು ಕೊಟ್ಟು, Dr. Soil ಬಿಟ್ಟ ನಂತರ ಅವರು ನೀರು ಕೊಡಲು ಸಾಧ್ಯವಾಗಿಲ್ಲ. ಕಡು ಬೇಸಿಗೆಯಲ್ಲೂ ನೀರಿಲ್ಲದ ಪರಿಸ್ಥಿತಿಯಲ್ಲಿ ಆ ಬೆಳೆ ಸಾಕಷ್ಟು ಚೆನ್ನಾಗಿತ್ತು. ತದನಂತರ ನಾನು ನೇರವಾಗಿ ಬಂದು Dr. Soil ಬಳಸಿದೆ.

ನನಗೆ ಸಾವಯವ ಕೃಷಿ ಬಗ್ಗೆ ಏನೂ ಗೊತ್ತಿಲ್ಲ. ನಾನು Dr. Soil ಬಳಸಿದ ಕೇವಲ 10 ದಿನದಲ್ಲಿ ದಳಗಳು ಬಹಳ ತಾಜಾ ಆಗಿ ಹಸಿರಿನಿಂದ ಕಂಗೊಳಿಸಿದವು. ಮಣ್ಣು ಮೃದುವಾಯಿತು. ಮರಿಗಳು ದಟ್ಟವಾಗಿ ಬಂದವು. 20 ರಿಂದ 25 ದಿನದ ಒಳಗೆ ಎರೆಹುಳುಗಳು ಬಂದವು. ಕಬ್ಬಿನಲ್ಲಿ ಹೆಚ್ಚು ಮರಿಗಳು ಬಂದವು. ಬಂದ ಮರಿಗಳೆಲ್ಲಾ ಸದೃಢವಾಗಿ ಬೆಳೆಯುತ್ತಿರುವುದು ವಿಶೇಷ. ಈಗ ನನ್ನ ಕಬ್ಬಿಗೆ ಎರಡೂವರೆ ತಿಂಗಳು ಬೆಳೆ ಬಹಳ ಬರಾಬರಿ ಇದೆ. ಕಸ ಹೆಚ್ಚಾಗಿ ಬಂದಿಲ್ಲ. ಯಾವುದೇ ರೋಗ ಬಂದಿಲ್ಲ. ನಾನು ಯಾವುದೇ ಸಿಂಪರಣೆ ಮಾಡಿಲ್ಲ. ಕಬ್ಬಿನಲ್ಲಿ ಅಂತರ ಬೆಳೆ ಸವತೆ – ಬೆಂಡೆ ಮಾಡಿದ್ದೇನೆ. ಅವು ಸಹ ಬಹಳ ಒಳ್ಳೆಯ ಬೆಳೆ ಬಂತು. ತೋಟದಲ್ಲಿ ರವದಿ ಮುಚ್ಚಿಗೆ ಹಾಕಿದ್ದೇವೆ. ತಿಂಗಳಿಗೆ ಎರಡು ಬಾರಿ ನೀರು ಹಾಯಿಸಿಕೊಂಡು ಹೋದರೆ ಸಾಕು. ನನ್ನ ಸಾವಯವ ಕಬ್ಬು ಕಟಾವಿಗೆ ಬರುತ್ತೆ. ಸಾವಯವ ಕೃಷಿಯ ಬಗ್ಗೆ ಸರಳವಾಗಿ, ಸುಲಭವಾಗಿ, ಯಶಸ್ವಿಯಾಗಿ ಬೆಳೆ ಬೆಳೆಯಬಹುದು ಎಂಬ ನಂಬಿಕೆ ಬಂದಿದೆ. ರೈತರಿಗೆ ಒಳ್ಳೆಯ ಕಾಲ ಬರ್ತಾ ಇದೆ ಎಂಬ ಆಶಾಭಾವನೆ Dr. Soil ಬಳಸಿದ ಪ್ರತಿಯೊಬ್ಬ ರೈತರಲ್ಲೂ ಮೂಡುತ್ತದೆ.

**40 ದಿನದಲ್ಲಿ ನನ್ನ ತೋಟದಲ್ಲಿ ಅಚ್ಚರಿ ಬದಲಾವಣೆ**
**ಸಾವಯವ ಕಬ್ಬಿನ ಕೃಷಿಗಾಗಿ ನಾನು ಪಡಲಿಲ್ಲ ಬವಣೆ**



# ನನ್ನ ಕೃಷಿಗೆ ಹೊಸ ಚೈತನ್ಯ ತುಂಬಿದ Dr. Soil

**ಪದವಿದರರಾದ ರಮೇಶ್‌ರವರಿಗೆ ಕೃಷಿಯಲ್ಲಿ ಅದರಲ್ಲೂ ವಿಶೇಷವಾಗಿ ಸಾವಯವ ಕೃಷಿಯಲ್ಲಿ ತಮ್ಮ ಉತ್ಪನ್ನಗಳಿಗೆ ತಾವೇ ನೇರ ಮಾರುಕಟ್ಟೆ ಮಾಡಿಕೊಂಡು ಕೃಷಿಯನ್ನು ಲಾಭದಾಯಕ ಉದ್ದಿಮೆ ಎಂದು ಸಾಧಿಸಿ ತೋರಿಸಬೇಕೆಂಬ ಹಂಬಲಿಕೆಗೆ ಪೂರಕವಾಗಿ Dr. Soil ಸಾವಯವ ಕೃಷಿ ಬದುಕಿನಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಈಗ ಅವರ ಆತ್ಮವಿಶ್ವಾಸ ಇಮ್ಮಡಿಯಾಗಿದೆ. ಅವರ ಮಾತುಗಳಲ್ಲೆ ಕೇಳಿ Dr. Soil ನೊಂದಿಗೆ ಅವರ ಕೃಷಿ ಎತ್ತ ಸಾಗಿದೆ ಎಂದು...**

**ಪ್ರ: ನಮಸ್ಕಾರ ರಮೇಶ್ ಸರ್.**
**ಉತ್ತರ:** ನಮಸ್ಕಾರ ಸರ್.

**ಪ್ರ: ಹೇಗಿದೆ ನಿಮ್ಮ ಕೃಷಿ?**
**ಉತ್ತರ:** ಬಹಳ ಚೆನ್ನಾಗಿದೆ ಸರ್.

**ಪ್ರ: ಯಾವ ಯಾವ ಬೆಳೆ ಇದೆ?**
**ಉತ್ತರ:** ಕಬ್ಬು ಮೂರೂವರೆ ಎಕರೆ, ವಿಳೆದೆಲೆ 10 ಗುಂಟೆ, ಹಾಗಲಕಾಯಿ 10 ಗುಂಟೆ ಬೆಳೆ ಇದೆ ಉಳಿದದ್ದು ದನಗಳ ಮೇವು ಇದೆ.

**ಪ್ರ: ನೀವು ಸಾವಯವ ಕೃಷಿಗೆ ಒಮ್ಮೆಗೆ ಬದಲಾಗಲು ಆದ ಪ್ರೇರಣೆ ಏನು ಸಾರ್.**
**ಉತ್ತರ:** ಶ್ರೀ ಕೆ.ಆರ್. ಹುಲ್ಲುನಾಚೇಗೌಡರ ಪ್ರವಚನ ಹಾಗೂ Dr. Soil ಬಳಸಿದ ತೋಟಗಳಲ್ಲಿ ಸಮೃದ್ಧತೆ ನನ್ನನ್ನು ಬದಲಾಗಲು ಪ್ರೇರೇಪಿಸಿತು.

**ಪ್ರ: ನೀವು Dr. Soil ಬಳಸಿ ಎಷ್ಟು ದಿನಗಳಾಗಿವೆ?**
**ಉತ್ತರ:** ಸಾರ್ ನಮ್ಮ ತೋಟಕ್ಕೆ ನಾನು 5 ತಿಂಗಳ ಹಿಂದೆ ಬಳಸಿದೆ.

**ಪ್ರ: Dr. Soil ಬಳಸಿದ ನಂತರ ನಿಮ್ಮ ಭೂಮಿಯಲ್ಲಿ ಆದ ಬದಲಾವಣೆಗಳೇನು?**
**ಉತ್ತರ:** ಸಾರ್, ಮಣ್ಣು ಬಹಳ ಮೃದುವಾಯಿತು, ಎರೆಹುಳುಗಳು ಕಾಣಿಸಿಕೊಂಡವು. ಕಬ್ಬಿನಲ್ಲಿ ಹೊಸ ಬೇರುಗಳು ಸಮೃದ್ಧಿಯಾಗಿ ಅಭಿವೃದ್ಧಿ ಹೊಂದಿದವು.

**ಪ್ರ: Dr. Soil ಬಳಸಿದ ನಂತರ ನಿಮ್ಮ ಕಬ್ಬಿನ ಬೆಳೆಯಲ್ಲಿ ಆದ ಬದಲಾವಣೆಗಳೇನು?**
**ಉತ್ತರ:** 10 ರಿಂದ 15 ದಿನಕ್ಕೆ ಬದಲಾವಣೆಗಳು ಪ್ರಾರಂಭವಾದವು ನಾವು ಹಿಂದೆಂದೂ ನೋಡಿರದಷ್ಟು ಮರಿಗಳು ಬಂದವು. ಬಂದ ಮರಿಗಳೆಲ್ಲ ಸದೃಢವಾಗಿ ಇದ್ದವು. ಬೆಳೆಯಲ್ಲಿ ಯಾವುದೇ ಕೊರತೆ ಕಾಣಲಿಲ್ಲ.

**ಪ್ರ: ಈಗ 5 ತಿಂಗಳ ನಂತರ ನಿಮ್ಮ ಬೆಳೆ ಹೇಗಿದೆ?**
**ಉತ್ತರ:** ಸೂಪರ್ ಆಗಿದೆ ಸರ್ 5 ತಿಂಗಳಲ್ಲಿ 10 ರಿಂದ 12 ಗಣಕೆ ಬಂದಿದೆ. ಬಂದಿರುವ ಕಬ್ಬು ಉತ್ತಮ ಗಾತ್ರ, ಉದ್ದ, ಬಣ್ಣದಿಂದ ಕೂಡಿದೆ.

**ಪ್ರ: ಕಬ್ಬಿಗೆ Dr. Soil ಬಿಟ್ಟು ಬೇರೆ ಯಾವುದಾದರೂ ಗೊಬ್ಬರ ಹಾಕಿದ್ದೀರಾ?**
**ಉತ್ತರ:** ಯಾವುದೇ ಗೊಬ್ಬರ ಹಾಕಿಲ್ಲ, ಯಾವುದೇ ಸಿಂಪರಣೆ ಮಾಡಿಲ್ಲ.

**ಪ್ರ: ಕಬ್ಬಿಗೆ ಯಾವುದಾದರೂ ರೋಗಗಳು ಬಂದಿತ್ತಾ?**
**ಉತ್ತರ:** ಯಾವುದೇ ರೋಗ ಈವರೆಗೆ ಬಂದಿಲ್ಲ. ನಾನು ಯಾವುದೇ ಸಿಂಪರಣೆ ಮಾಡಿಲ್ಲ.

**ಪ್ರ: ನೀರು ಹೇಗೆ ಹಾಯಿಸುತ್ತಿದ್ದೀರಿ?**
**ಉತ್ತರ:** Drip ಮೂಲಕ ಹಾಯಿಸುತ್ತಿದ್ದೇನೆ 8 ರಿಂದ 10 ದಿನಕ್ಕೆ ಒಮ್ಮೆ ನೀರು ಕೊಡುತ್ತಿದ್ದೇನೆ.

**ಪ್ರ: ಎಷ್ಟು ಇಳುವರಿ ಬರುವ ನಿರೀಕ್ಷೆ ಇದೆ?**
**ಉತ್ತರ:** ಒಂದು ಕಬ್ಬು ಈಗಾಗಲೇ 1 ರಿಂದ 2 ಕೆ.ಜಿ. ಬರುವ ಹಾಗೆ ಇದೆ. ಆ ಲೆಕ್ಕದಲ್ಲಿ ನೋಡಿದರೆ ಕಟಾವು ಸಮಯಕ್ಕೆ, ಇನ್ನೂ ಸಮೃದ್ಧವಾಗಿ ಬೆಳೆದಿರುತ್ತದೆ. ನನ್ನ ಅಂದಾಜು 80 ರಿಂದ 90 ಟನ್ ದಾಟುತ್ತದೆ.

**ಪ್ರ: ನೀವು ಈ ಮುಂಚಿನ ರಾಸಾಯನಿಕ ಕಬ್ಬಿನ ಕೃಷಿಗೂ Dr. Soil ಸಾವಯವ ಕೃಷಿಗೆ ಪ್ರಮುಖ ವ್ಯತ್ಯಾಸವೇನು?**
**ಉತ್ತರ:** ಸಾಕಷ್ಟು ವ್ಯತ್ಯಾಸವಿದೆ. ಈ ಮುಂಚಿನ ರಾಸಾಯನಿಕ ಪದ್ಧತಿಯಲ್ಲಿ ಸದಾ ಬೆಳೆ ಬಗ್ಗೆ ಚಿಂತೆ ಇರುತ್ತಿತ್ತು. ಔಷಧಿ, ಗೊಬ್ಬರ, ಕಸದ ಸಮಸ್ಯೆಗಳಿಂದ ಹೆಚ್ಚಿನ ಖರ್ಚು ಆಗುತ್ತಾ ಇತ್ತು, ನೀರು ಕೂಡ ಹೆಚ್ಚು ಕೊಡಬೇಕಿತ್ತು. ಈಗ ಖರ್ಚು ಕಡಿಮೆ, ರೋಗದ ಬಾಧೆಯೂ ಇಲ್ಲ, ಕೃಷಿಯಲ್ಲಿ ನೆಮ್ಮದಿ ಇದೆ, ಬೆಳೆ ಬಹಳ ಚೆನ್ನಾಗಿದೆ.

**ಪ್ರ: ಕೇವಲ 5 ತಿಂಗಳಲ್ಲಿ ನಿಮ್ಮ ಕೃಷಿಯಲ್ಲಿ ಇಷ್ಟೊಂದು ಬದಲಾವಣೆ ಆಗಿದ್ದಕ್ಕೆ ಏನು ಕಾರಣ?**
**ಉತ್ತರ:** Dr. Soil ಪ್ರಮುಖವಾದ ಕಾರಣ ಜೊತೆಗೆ ಮಣ್ಣಿನಲ್ಲಿ ಜೈವಿಕ ಪರಿಸರ ನಿರ್ಮಾಣವಾಗಿ ಮಣ್ಣಿನಲ್ಲಿ ಎರೆಹುಳುಗಳು ಬಂದಿರುವುದು ಒಂದು ಕಾರಣವಾಗಿದೆ.



**ಎಲೆ ತೋಟದಲ್ಲಿ ಬೇರುಗಳನ್ನು ಎರೆಹುಳು ಕಡಿಯುತ್ತದೆ ಎಂಬ ತಪ್ಪು ಕಲ್ಪನೆಯಿಂದ ಎಂಡೋಸಲ್ಫಾನ್ ಹಾಕ್ತಾ ಇದ್ದೀವಿ. ಹಸಿಯಾಗಿರುವ ಹಾಗೂ ಜೀವಂತ ಬೇರುಗಳನ್ನು ಎರೆಹುಳು ತಿನ್ನುವುದಿಲ್ಲ ಎಂಬ ಸತ್ಯ ಅರಿವಾಗಿದೆ. ಕೃಷಿಯಲ್ಲಿ ಎಂಡೋಸಲ್ಫಾನ್ ಬಳಸುವ ಪಾಪದ ಕೆಲಸ ಇನ್ನೂ ಮುಂದೆ ಮಾಡಲ್ಲ ಇದು ನನ್ನ ಅಂತರಾಳದ ಪ್ರತಿಜ್ಞೆ. ನನ್ನ ಹಲವು ದಿನಗಳ ಕನಸು ನನಸಾಗಿವೆ. ನಾನು ಹೆಮ್ಮೆಯ Dr. Soil ಸಾವಯವ ಕೃಷಿಕ.**

**ಪ್ರ: ವಿಳೆದೆಲೆ ತೋಟಕ್ಕೆ ನೀವು Dr. Soil ಬಳಸಿದ್ದೀರಾ?**
**ಉತ್ತರ:** ಹೌದು, ಬಳಸಿದ್ದೇನೆ ಬಹಳ ಉಪಯೋಗವಾಗಿದೆ.

**ಪ್ರ: Dr. Soil ಬಳಸಿದ್ದಕ್ಕೆ ಏನು ಉಪಯೋಗವಾಯಿತು?**
**ಉತ್ತರ:** ಬದಲಾವಣೆ ವಿಚಾರ ಹೆಚ್ಚು ಇದೆ. ವಿಳೆದೆಲೆ ತೋಟದಲ್ಲೂ ಮಣ್ಣು ಮೃದುವಾಗಿದೆ, ಎರೆಹುಳು ಬಂದಿದೆ.

**ಪ್ರ: ಎಲೆಬಳ್ಳಿಯಲ್ಲಿ ಆದ ಬದಲಾವಣೆಗಳೇನು?**
**ಉತ್ತರ:** ಮುಂಚೆ ಬಳ್ಳಿ ಒಂದೇ ಸಮನೆ ಓಟ ಇತ್ತು. ಎತ್ತರ ಬೆಳಿತಾ ಇತ್ತು. ಆದರೆ, ಹೆಚ್ಚು ಫಸಲು ಬರುತ್ತಿರಲಿಲ್ಲ. ಈಗ ಬಳ್ಳಿಯಲ್ಲಿ ಕವಲುಗಳು ಹೆಚ್ಚಾಗಿ ಮೂಡಿವೆ. ಎಲೆಗಳ ಸಂಖ್ಯೆ ಹೆಚ್ಚಾಗಿದೆ. ಎರಡು ಪಟ್ಟು ಹೆಚ್ಚಿಗೆ ಎಲೆಗಳು ಸಿಗುತ್ತಿವೆ.

**ಪ್ರ: ಎಲೆಗಳಲ್ಲಿ ಏನು ಬದಲಾವಣೆಯಾಗಿವೆ?**
**ಉತ್ತರ:** ಎಲೆಗಳು ಬಹಳ ಆಕರ್ಷಕ ಬಣ್ಣದಲ್ಲಿವೆ. ಎಲೆಗಳು ಮೃದುವಾಗಿವೆ. ಆದರೆ ಹರಿಯುವುದಿಲ್ಲ. ಎಲೆಗಳು ಅಗಲವಾಗಿವೆ. ಬಹಳ ತಾಜಾತನವಿದೆ. ಒಳ್ಳೆಯ ಸ್ವಾದ ಮೃದುಪನ ಅನುಭವವಿದೆ.

**ಪ್ರ: ಮಾರುಕಟ್ಟೆಯಲ್ಲಿ ನಿಮ್ಮ ಎಲೆಗೆ ಹೇಗೆ ಬೇಡಿಕೆ ಇದೆ?**
**ಉತ್ತರ:** ನಮ್ಮ ಎಲೆಗಳು Local ಮಾರುಕಟ್ಟೆಯಲ್ಲಿ ಹೆಚ್ಚು ಬಳಸುತ್ತಾರೆ. ಬಹಳ ಬೇಡಿಕೆ ಇದೆ. ಒಳ್ಳೆಯ ಬೆಲೆ ಸಿಗ್ತಾ ಇದೆ.

**ಪ್ರ: ಒಟ್ಟಾರೆ ಇಳುವರಿ ಹೇಗಿದೆ?**
**ಉತ್ತರ:** 2007 ರಿಂದ ನಾವು ವಿಳೆದೆಲೆ ಬೆಳೆಯುತ್ತಿದ್ದೇವೆ. ಇದುವರೆಗೂ ಇಂತಹ ಇಳುವರಿ ನೋಡಿರಲಿಲ್ಲ. Dr. Soil ಬಳಸಿದ ನಂತರ ಇಳುವರಿ ಹೆಚ್ಚಾಗಿದೆ.

**ಪ್ರ: ಹಾಗಲಕಾಯಿ ಬೆಳೆಯಲ್ಲಿ ನೀವು Dr. Soil ಬಳಸಿದ್ದೀರಿ ಅದರ ಬಗ್ಗೆ ನಿಮ್ಮ ಅನುಭವ ಏನು?**
**ಉತ್ತರ:** ಏಕ್‌ದಮ್ Super ಇದೆ. ಬಳ್ಳಿ ಚೆನ್ನಾಗಿ ಹಬ್ಬಿದೆ. ಹೂಗಳು ಉದುರುತ್ತಿಲ್ಲ. ಉತ್ತಮವಾದ ಫಸಲು ಪ್ರಾರಂಭವಾಗಿದೆ. ಮಾರುಕಟ್ಟೆಯಲ್ಲಿ ನಮ್ಮ ಹಾಗಲಕಾಯಿಗೆ ಒಳ್ಳೆಯ ಬೇಡಿಕೆ ಇದೆ.





## ಕಬ್ಬಿಗೆ ಡಾ ಸಾಯಿಲ್ ಬಳಸುವ ವಿಧಾನ ಹೇಗೆ?

- ಡಾ.ಸಾಯಿಲ್ ಬಳಸುವ ಮುಂಚೆ ನೀರು ಹಾಯಿಸಿ ಮಣ್ಣನ್ನು ಹಸಿ ಮಾಡಿಕೊಂಡಿರಬೇಕು.
- ಹಸಿ ಮಾಡಿದ ನಂತರ ಒಂದು ಸಾಲಿಗೆ ಜಗ್ ಮೂಲಕ ನೀರು ಸುರಿಯುತ್ತಾ ಹೋಗಬೇಕು. ಒಂದು ಸಾಲಿಗೆ ಎಷ್ಟು ಜಗ್ ನೀರು ಸುರಿದಿದ್ದೀರಿ ಮತ್ತು ನಿಮ್ಮ ತೋಟದಲ್ಲಿ ಎಷ್ಟು ಸಾಲುಗಳಿವೆ ಲೆಕ್ಕ ಮಾಡಿ. ಅಷ್ಟು ನೀರಿಗೆ ಡಾ. ಸಾಯಿಲ್ ಸುರಿದು ಜಗ್ ಮೂಲಕ ಕಬ್ಬಿನ ಪಕ್ಕದಲ್ಲಿ ಸಾಲಿನಲ್ಲಿ ಸುರಿಯಬೇಕು.
- ಡ್ರಿಪ್ ಮೂಲಕ ಡಾ ಸಾಯಿಲ್ ವಿತರಿಸಬೇಕಾದರೆ ಮೊದಲು ನೀರನ್ನು ಡ್ರಿಪ್ ಮೂಲಕ ಹರಿಸಿ ಮಣ್ಣನ್ನು ಹಸಿ ಮಾಡಿ ವೆಂಚರ್ ಸಹಾಯದಿಂದ ಡಾ ಸಾಯಿಲ್ ಅನ್ನು ನೀರಿಗೆ ಬೆರೆಸಿಕೊಂಡು ಎಲ್ಲಾ ಸಸಿಗಳಿಗೆ ಸಮಾನವಾಗಿ ವಿತರಣೆಯಾಗುವಂತೆ ಬಿಡಬೇಕು.
- ಸಬ್ ಸರ್ಫೇಸ್ ನಂತಹ ಡ್ರಿಪ್ ಇದ್ದರೆ ಸಬ್‌ಸರ್ಫೇಸ್ ಮೂಲಕ ಡಾ ಸಾಯಿಲ್ ಬಿಡಬಾರದು. ಮಣ್ಣನ್ನು ಹಸಿ ಮಾಡಿ ಜಗ್ ಮೂಲಕ ಡ್ರಂಚಿಂಗ್ ಮಾಡಬೇಕು.

## ಡಾ ಸಾಯಿಲ್ ಬಳಸುವಾಗ ಎಚ್ಚರಿಕೆ ವಹಿಸಬೇಕಾದ ಅಂಶಗಳು :

- ಡಾ. ಸಾಯಿಲ್ ಕ್ಯಾನನ್ನು ಬಿಸಿಲಿನಲ್ಲಿ ಇಡಬಾರದು.
- ಡಾ ಸಾಯಿಲ್ ಬೆಳೆಗಳಿಗೆ ತಂಪಾದ ಸಮಯದಲ್ಲಿ ಬೆಳಿಗ್ಗೆ ಅಥವಾ ಸಂಜೆ ಮಣ್ಣು ಹಸಿಯಾಗಿದ್ದಾಗ ನೀರಿನೊಡನೆ ಬಿಡುವುದು ಬಹಳ ಉತ್ತಮ.
- ಡಾ ಸಾಯಿಲ್ ಬಳಸುವ ಡ್ರಂ ವಿತರಿಸಲು ಬಳಸುವ ಜಗ್ ಹಾಗೂ ಇತರ ಪರಿಕರಗಳಲ್ಲಿ ರಾಸಾಯನಿಕಗಳು ಬಳಸಿರಬಾರದು. ಡಾ ಸಾಯಿಲ್ ಅನ್ನು ಸಿಂಪರಣೆ ಮಾಡಬಾರದು.
- ರಾಸಾಯನಿಕ ಗೊಬ್ಬರಗಳು ಅಥವಾ ಸಿಂಪರಣೆಗಳೊಂದಿಗೆ ಡಾ ಸಾಯಿಲ್ ಮಿಕ್ಸ್ ಮಾಡಿ ಬಳಸಬಾರದು.
- ಡಾ ಸಾಯಿಲ್ ಬೆಳೆಗಳಿಗೆ ನೀಡಿದ ನಂತರ ಬೆಳೆಗಳಿಗೆ ಒಣ ತ್ಯಾಜ್ಯ ಅಥವಾ ರವದಿಯ ಹೊದಿಕೆ ಹಾಕಿದರೆ ಬಹಳ ಉತ್ತಮ. ಡಾ ಸಾಯಿಲ್ ನೀಡಿದ ನಂತರ ಯಾವುದೇ ರಾಸಾಯನಿಕ ಹಾಗೂ ವಿಷಯುಕ್ತ ಗೊಬ್ಬರಗಳನ್ನು ಬೆಳೆಗಳಿಗೆ ನೀಡಬೇಡಿ.

**ರೈತರ ಸೇವೆಯಲ್ಲಿ ಪತ್ರಿಕಾ ಪೋಷಕರು**

**ಕೃಷ್ಣಾ ಏಜೆನ್ಸೀಸ್**
ಸವಸುದ್ದಿ, ರಾಯಭಾಗ ತಾಲ್ಲೂಕು, ಬೆಳಗಾಂ ಜಿಲ್ಲೆ. ಮಾಹಿತಿಗಾಗಿ :
9535623232, 9900594239, 9902865045
9972150095, 9902865046

**ರಾಜಲಕ್ಷ್ಮೀ ಟ್ರೇಡರ್ಸ್**
ರಾಜಾಪುರ, ಗೋಕಾಖ, ಬಾಗಲಕೋಟೆ ಜಿಲ್ಲೆ, ಮಾಹಿತಿಗಾಗಿ.
9945057627, 9449624463, 9902677354, 9620132268, 9449922959

ವಿಳಾಸ: ಸಸ್ಯ ಸಂಜೀವಿನಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ (ರಿ) ನಂ. 83, ಬಿ.ಎಸ್.ಎಫ್.– ಎಸ್.ಟಿ.ಸಿ.ರೋಡ್, ಕಟ್ಟಿಗೇನಹಳ್ಳಿ, ಬಾಗಲೂರು ರೋಡ್, ಯಲಹಂಕ, ಬೆಂಗಳೂರು – 560 063. e-mail : sasyasanjeevinitrust@gmail.com